# ದಿ: 24.07.2023 ಸೋಮವಾರ ನಡೆದ ಪ್ರಶಾಸನ ಸಮಿತಿಯ 67ನೇ ಸಭೆಯ ನಡಾವಳಿಗಳು.

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪ್ರಶಾಸನ ಸಮಿತಿಯ ಅರವತ್ತ ಏಳನೆಯ ಸಭೆಯನ್ನು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ **ದಿನಾಂಕ: 24-07-2023** ಸೋಮವಾರ ಬೆಳಿಗ್ಗೆ 11.00 ಗಂಟೆಗೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಸಿಂಡಿಕೇಟ್ ಸಭಾಂಗಣದಲ್ಲಿ ಕರೆಯಲಾಗಿತ್ತು. ಸಭೆಯಲ್ಲಿ ಈ ಕೆಳಗಿನವರು ಹಾಜರಿದ್ದರು.

1. ಡಾ. ಅಹಲ್ಯಾ ಎಸ್., ಕುಲಪತಿಗಳು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ - ಅಧ್ಯಕ್ಷರು
2. ಶ್ರೀ ನರಸಿಂಹಪ್ಪ, ಜಂಟಿ ಕಾರ್ಯದರ್ಶಿಗಳು, (ತಾ.ಶಿ.) ಉನ್ನತ ಶಿಕ್ಷಣ ಇಲಾಖೆ - ಸದಸ್ಯರು
3. ಶ್ರೀಮತಿ ಉಮಾ ಕೆ., ಜಂಟಿ ಕಾರ್ಯದರ್ಶಿಗಳು ಹಣಕಾಸು ಇಲಾಖೆ - ಸದಸ್ಯರು
4. ಪ್ರೊ. ರಜನೀಶ ಕುಮಾರ ಮಿಶ್ರ, ಸಂಸ್ಕೃತ ಮತ್ತು ಇಂಡಿಕ್ ಅಧ್ಯಯನ ವಿಭಾಗ, ಜವಾಹರಲಾಲ ನೆಹರು ವಿಶ್ವವಿದ್ಯಾಲಯ, ನವದೆಹಲಿ – 110067 - ಸದಸ್ಯರು
5. ಡಾ. ಆರ್. ಶ್ರೀಧರ ಶಾಸ್ತ್ರಿ, ಸೂರಿ, ಪ್ರಾಧ್ಯಾಪಕರು(ನಿ), ಶ್ರೀ ಸಿದ್ಧಲಿಂಗೇಶ್ವರ ಸಂಸ್ಕೃತ ಕಾಲೇಜು, ಶ್ರೀ ಸಿದ್ಧಗಂಗಾ ಮಠ, ತುಮಕೂರು - ಸದಸ್ಯರು
6. ಶ್ರೀಮತಿ ಸಮತಾ ಹೊಸಪೇಟೆ, "ಬಾಲಾಜಿ", ಕುವೆಂಪು ನಗರ ಬಸ್ ನಿಲ್ದಾಣದ ಎದುರುಗಡೆ, ಹನುಮಾನ ನಗರ, ಬೆಳಗಾವಿ – 19 - ಸದಸ್ಯರು
7. ಡಾ. ರೂಪಶ್ರೀ ಎಸ್., ಕುಲಸಚಿವರು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ. - ಸದಸ್ಯ ಕಾರ್ಯದರ್ಶಿಗಳು

**ಗೈರು ಹಾಜರಾದವರು:**

1. ಕಾರ್ಯದರ್ಶಿಗಳು, ಕಂದಾಯ ಇಲಾಖೆ (ಧಾರ್ಮಿಕ ದತ್ತಿ ವಿಭಾಗ), ಬೆಂಗಳೂರು.
2. ಮಹಾ ನಿರ್ದೇಶಕರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಅರಮನೆ ಆವರಣ, ಮೈಸೂರು.

ಸಭೆಯ ಆರಂಭದಲ್ಲಿ ಕುಲಸಚಿವರು ಪ್ರಾಸ್ತಾವಿಕವಾಗಿ ಮಾತನಾಡಿ ನೂತನವಾಗಿ ನಾಮನಿರ್ದೇಶಿತರಾದ ಸದಸ್ಯರನ್ನು ಸಭೆಗೆ ಪರಿಚಯಿಸಿ ಎಲ್ಲರನ್ನೂ ಸ್ವಾಗತಿಸಿದರು. ನಂತರ ಕಾರ್ಯಸೂಚಿಯಂತೆ ವಿಷಯವಾರು ಚರ್ಚಿಸಿ ನಿರ್ಣಯ ಕೈಗೊಳ್ಳಲಾಯಿತು.

| ವಿ. ಸಂ. | ವಿಷಯ ಮತ್ತು ಟಿಪ್ಪಣಿ |
|---|---|
| ವಿಷಯ 01 | **ಪ್ರಶಾಸನ ಸಮಿತಿ 66ನೇ ಸಭೆಯ ಅನುಪಾಲನಾ ವರದಿಯನ್ನು ಅನುಮೋದಿಸುವ ಬಗೆಗೆ.** |
| **ಟಿಪ್ಪಣಿ** | ಪ್ರಶಾಸನ ಸಮಿತಿ 66ನೇ ಸಭೆಯು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ದಿನಾಂಕ: 19.12.2022ರಂದು ನಡೆಯಿತು. ಸಭೆಯ ನಿರ್ಣಯದಂತೆ ಕೈಗೊಳ್ಳಲಾದ ಅನುಪಾಲನೆಗಳನ್ನು ಸಿದ್ಧಪಡಿಸಿ ಅನುಪಾಲನಾ ವರದಿಯನ್ನು ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ. (ಅನುಬಂಧ-01) |

<table>
<tr><td>ನಿರ್ಣಯ</td><td>ಸಭೆಯು ಪ್ರಶಾಸನ ಸಮಿತಿಯ 66ನೇ ಸಭೆಯ ಅನುಪಾಲನಾ ವರದಿಯನ್ನು ಅನುಮೋದಿಸಿತು.</td></tr>
<tr><td>ವಿಷಯ 02</td><td>ಯುಜಿಸಿ ವೇತನ ಶ್ರೇಣಿಯ ಏಳು ಜನ ಸಹಾಯಕ ಪ್ರಾಧ್ಯಾಪಕರು ಮತ್ತು ಒಂದು ಸಹಾಯಕ ಗ್ರಂಥಪಾಲಕರಿಗೆ ಸಿಎಎಸ್ ಪದನ್ನೋತಿ ನೀಡುವ ಬಗೆಗೆ.</td></tr>
<tr><td>ಟಿಪ್ಪಣಿ</td><td>1. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಈ ಯುಜಿಸಿ ವೇತನ ಶ್ರೇಣಿಯ 06 ಜನ ಸಹಾಯಕ ಪ್ರಾಧ್ಯಾಪಕರಿಗೆ ಸಿಎಎಸ್ ಪದನ್ನೋತಿಗೆ ಸಂಬಂಧಿಸಿದಂತೆ ಅಧಿಸೂಚನೆ ಸಂಖ್ಯೆ: KSU/CAS/02/UGC-Staff/2021-22 Date:21.11.2022 ರಂತೆ ಸಿಎಎಸ್ ಪದನ್ನೋತಿಗಾಗಿ ಅರ್ಹ ಸಹಾಯಕ ಪ್ರಾಧ್ಯಾಪಕರುಗಳಿಂದ ಅರ್ಜಿಗಳನ್ನು ಪಡೆಯಲಾಗಿತ್ತು. :KSU/CAS/02/UGC-Staff/2021-22 ದಿನಾಂಕ:30.12.2022ರನ್ವಯ Screening Cum Eveluation Committee ಸಭೆಯ ನಿರ್ಣಯದಂತೆ ಆರು ಜನ ಸಹಾಯಕ ಪ್ರಾಧ್ಯಾಪಕರನ್ನು Academic Level 11 ರಿಂದ 12ಕ್ಕೆ ಸಿಎಎಸ್ ಪದನ್ನೋತಿ ನೀಡಲು ಶಿಪಘಾರಸ್ಸು ಮಾಡಲಾಗಿದೆ.<br>1. ಡಾ. ವಿನಯ್ ಪಿ.<br>2. ಡಾ. ಶರತ್‌ಚಂದ್ರಸ್ವಾಮಿ<br>3. ಡಾ. ಭಾಸ್ಕರ್ ಭಟ್ ಜೋಶಿ<br>4. ಡಾ. ಮಂಜುನಾಥ್ ಭಟ್<br>5. ಡಾ. ಅನುಪಮಾ ಬಿ.<br>6. ಡಾ. ರೇಖಾದೇವಿ ಎಸ್ ಎಚ್<br><br>2. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಈ ಯುಜಿಸಿ ವೇತನ ಶ್ರೇಣಿಯ ಸಹಾಯಕ ಗ್ರಂಥಪಾಲಕರು ಸಿಎಎಸ್ ಪದನ್ನೋತಿಗೆ ಸಂಬಂಧಿಸಿದಂತೆ ಅಧಿಸೂಚನೆ ಸಂಖ್ಯೆ: KSU/CAS/02/UGC-Staff/2021-22 Date:30.9.2022 ರಂತೆ ಸಿಎಎಸ್ ಪದನ್ನೋತಿಗಾಗಿ ಅರ್ಹ ಸಹಾಯಕ ಗ್ರಂಥಪಾಲಕರಿಂದ ಅರ್ಜಿಗಳನ್ನು ಪಡೆಯಲಾಗಿತ್ತು. :KSU/CAS/02/UGC-Staff/2021-22 ದಿನಾಂಕ:30.12.2022ರನ್ವಯ Screening Cum Eveluation Committee ಸಭೆಯ ನಿರ್ಣಯದಂತೆ ಡಾ. ಕವಿತಾ ಬಿರಾದಾರ, ಸಹಾಯಕ ಗ್ರಂಥಪಾಲಕರು ಇವರಿಗೆ Academic Level 11 ರಿಂದ 12ಕ್ಕೆ ಸಿಎಎಸ್ ಪದನ್ನೋತಿ ನೀಡಲು ಶಿಪಾರಸ್ಸು ಮಾಡಲಾಗಿದೆ. ಸಂಬಂಧಿಸಿದ ವರದಿಯನ್ನು ಅನುಮೋದನೆಗಾಗಿ ಮಂಡಿಸಿದೆ.<br><br>3. ಸಹಾಯಕ ಪ್ರಾಧ್ಯಾಪಕರಿಗೆ ಸಿಎಎಸ್ ಪದೋನ್ನತಿಗೆ ಸಂಬಂಧಿಸಿದಂತೆ ಅಧಿಸೂಚನೆ ಸಂಖ್ಯೆ: Notification No: KSU/CAS/02/UGC-Staff/2021-22; Date: 24.03.2023; ರಂತೆ ಅರ್ಹ ಸಹಾಯಕ ಪ್ರಾಧ್ಯಾಪಕರುಗಳಿಂದ ಅರ್ಜಿಗಳನ್ನು ಪಡೆಯಲಾಗಿತ್ತು. No: KSU/CAS/02/UGC-Staff/2021-22; Date: 26.06.2023 ರನ್ವಯ ದಿನಾಂಕ: 30.06.2023ರ Screening Cum Eveluation Committee ಸಭೆಯ ನಿರ್ಣಯದಂತೆ ಡಾ. ವಿನಾಯಕ ನಾಮಣ್ಣವರ ಸಹಾಯಕ ಪ್ರಾಧ್ಯಾಪಕರು ಇವರಿಗೆ Academic Level 11 ರಿಂದ 12ಕ್ಕೆ ಸಿಎಎಸ್ ಪದೋನ್ನತಿ ನೀಡಲು ಶಿಫಾರಸ್ಸು ಮಾಡಿದ್ದು, ಸಂಬಧಿಸಿದ ವರದಿಯನ್ನು ಸಭೆಯ ಅವಗಾಹನೆಗೆ ಸಲ್ಲಿಸಿದೆ.<br><br>ದಿ: 09.06.2023 ರಂದು ನಡೆದ ಹಣಕಾಸು ಸಮಿತಿಯ 43ನೇ ಸಭೆಯು ಪದೋನ್ನತಿ ಸಮಿತಿಯ ಶಿಫಾರಸ್ಸನ್ನು ಅನುಮೋದಿಸಿ, ಆದೇಶ ಹೊರಡಿಸಿದ ದಿನಾಂಕದಿಂದ ಜಾರಿಗೆ ಬರುವಂತೆ ಆರ್ಥಿಕ ಸೌಲಭ್ಯವನ್ನು ಮಂಜೂರು ಮಾಡಲು ತೀರ್ಮಾನಿಸಿದ್ದು, ಒಟ್ಟು ಏಳು ಜನ ಸಹಾಯಕ ಪ್ರಾಧ್ಯಾಪಕರು ಮತ್ತು ಒಂದು ಸಹಾಯಕ ಗ್ರಂಥಪಾಲಕರಿಗೆ ಸಿಎಎಸ್ ಪದನ್ನೋತಿ ನೀಡುವ ಬಗ್ಗೆ ಸಭೆಯ ನಿರ್ಣಯಕ್ಕಾಗಿಮಂಡಿಸಿದೆ.</td></tr>
</table>

| | |
|---|---|
| | |
| ನಿರ್ಣಯ | **ಸಿಎಎಸ್ ಪದನ್ನೋತಿ ನೀಡುವ ಬಗ್ಗೆ ಸಭೆಯು ವಿಸ್ತಾರವಾಗಿ ಚರ್ಚಿಸಿ ಸಿಎಎಸ್ ಪದೋನ್ನತಿಯನ್ನು ಅನುಮೋದಿಸಿತು. ಯು. ಜಿ. ಸಿ ನಿಯಮಗಳಂತೆ ಸಿಎಎಸ್ ಗೆ ಅರ್ಹತೆ ಹೊಂದಿದ ದಿನದಿಂದ ಪದೋನ್ನತಿ ಸೌಲಭ್ಯವನ್ನು ನೀಡಬೇಕು. ಆದರೆ ಆರ್ಥಿಕ ಇಲಾಖೆಯು ಸಿಎಎಸ್ ಪದೋನ್ನತಿ ಆದೇಶ ಹೊರಡಿಸಿದ ದಿನದಿಂದ ಆರ್ಥಿಕ ಸೌಲಭ್ಯ ನೀಡಬೇಕು ಎಂದು ತಿಳಿಸಿರುತ್ತದೆ. ಆದ್ದರಿಂದ ಯಥಾಸ್ಥಿತಿಯಲ್ಲಿ ಆದೇಶ ಹೊರಡಿಸಿದ ದಿನಾಂಕದಿಂದ ಆರ್ಥಿಕ ಸೌಲಭ್ಯವನ್ನು ನೀಡಿ, ಈ ಬಗ್ಗೆ ಸರ್ಕಾರಕ್ಕೆ/ಯು. ಜಿ. ಸಿ ಗೆ ಪತ್ರ ಬರೆದು, ಅದರಂತೆ ಅನುದಾನ ಬಿಡುಗಡೆಯಾದ ನಂತರ ಅರ್ಹತೆ ಹೊಂದಿದ ದಿನದಿಂದ ಆರ್ಥಿಕ ಸೌಲಭ್ಯ ನೀಡಲು ಕ್ರಮ ವಹಿಸಲು ತೀರ್ಮಾನಿಸಲಾಯಿತು.** |
| ವಿಷಯ 03<br><br>ಟಿಪ್ಪಣಿ | **2022-23ನೇ ಸಾಲಿನ ಪರಿಷ್ಕೃತ ಕ್ರಿಯಾ ಯೋಜನೆಯನ್ನು ಸ್ಥಿರೀಕರಿಸುವ ಬಗೆಗೆ.**<br>ಪ್ರಸಕ್ತ ಸಾಲಿನಲ್ಲಿ ಸರ್ಕಾರದಿಂದ ಬಂದಂತಹ ಅನುದಾನ/ಆಂತರಿಕ ಹಾಗೂ ಯೋಜನೆಗಳ ಮೂಲಗಳಿಂದ ಬಂದ ಆದಾಯದನ್ವಯ ಅಂದಾಜಿನೊಡನೆ ಪರಿಷ್ಕೃತ ಕ್ರಿಯಾ ಯೋಜನೆ ತಯಾರಿಸಿ ದಿ: 09.06.2023 ರಂದು ನಡೆದ ಹಣಕಾಸು ಸಮಿತಿಯ 43ನೇ ಸಭೆಯಲ್ಲಿ ಮಂಡಿಸಿದ್ದು, ಸಭೆಯು<br><br>**2022-23ನೇ ಸಾಲಿನ ಪರಿಷ್ಕೃತ ಕ್ರಿಯಾ ಯೋಜನೆಯನ್ನು ಸ್ಥಿರೀಕರಿಸಿತು. ಹಾಗೆಯೇ ಸಮಿತಿಯು ಈ ಕೆಳಕಂಡ ಅಂಶಗಳನ್ನು ತ್ವರಿತವಾಗಿ ಅನುಷ್ಠಾನಗೊಳಿಸಲು ಸೂಚಿಸಿತು.**<br>**1. ಕ್ರಿಯಾ ಯೋಜನೆಯನ್ನು ಗಮನಿಸಲಾಗಿ, ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಯ SC/ST ವಿದ್ಯಾರ್ಥಿಗಳ ಅಭಿವೃದ್ಧಿ ಕಾರ್ಯಕ್ರಮಗಳಿಗಾಗಿ ಬಾಕಿ ಉಳಿಸಿಕೊಂಡಿರುವ ಅನುದಾನದ ಮೊತ್ತ 4,27,68,884/- ರೂಗಳನ್ನು ಖರ್ಚು ಮಾಡುವ ಮುನ್ನ ಪರಿಷ್ಕೃತ ಕ್ರಿಯಾ ಯೋಜನೆಯನ್ನು ಸರ್ಕಾರಕ್ಕೆ ಸಲ್ಲಿಸಿ, ಸರ್ಕಾರದ ನಿರ್ದೇಶನದ ನಂತರ ಅನುಷ್ಠಾನಗೊಳಿಸಲು ಸೂಚಿಸಿತು.**<br>**2. ಸಂಬಂಧಿಸಿದ ಯೋಜನೆಗೆ ಒಳಪಡುವ ವಿಶ್ವವಿದ್ಯಾಲಯ/ಕಾಲೇಜುಗಳು/ ಪಾಠಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಪಟ್ಟಿಯನ್ನು ತರಿಸಿಕೊಂಡು, ಸದರಿ ಫಲಾನುಭವಿಗಳಿಗೆ ಸೌಲಭ್ಯವನ್ನು ವಿಸ್ತರಿಸಲು ಹಾಗೂ ಇನ್ನಿತರ ಅಭಿವೃದ್ಧಿ ಕಾರ್ಯಗಳನ್ನು ಮೂಲ ಯೋಜನೆಯಂತೆ ಜಾರಿಗೆ ತರಲು ಸೂಚಿಸಿತು.**<br><br>**ಈ ಬಗ್ಗೆ ಪ್ರಶಾಸನ ಸಮಿತಿಯ ನಿರ್ಣಯಕ್ಕಾಗಿ ಮಂಡಿಸಿದೆ.** |
| ನಿರ್ಣಯ | **ಸಭೆಯು 2022-23ನೇ ಸಾಲಿನ ಪರಿಷ್ಕೃತ ಕ್ರಿಯಾ ಯೋಜನೆಯನ್ನು ಅನುಮೋದಿಸಿತು. ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಯ SC/ST ವಿದ್ಯಾರ್ಥಿಗಳ ಅಭಿವೃದ್ಧಿ ಕಾರ್ಯಕ್ರಮಗಳನ್ನು ಸರ್ಕಾರದ ಅನುಮತಿಯೊಂದಿಗೆ ಜಾರಿಗೊಳಿಸಲು ಸೂಚಿಸಿತು.** |
| ವಿಷಯ 04<br><br>ಟಿಪ್ಪಣಿ | **ಹೊರಗುತ್ತಿಗೆ ಆಧಾರದ ಮೇಲೆ ನೇಮಕಕೊಂಡ (Web Designer) ಸಂಚಿತ ಮೊತ್ತ ರೂ. 30,000/– ಗಳಿಗೆ ಘಟನೋತ್ತರ ಅನುಮೋದನೆಯ ಬಗೆಗೆ.**<br>ನ್ಯಾಕ್ ಕಾರ್ಯಕ್ಕಾಗಿ ಹೊರಗುತ್ತಿಗೆ ಆಧಾರದ ಮೇಲೆ ಒಬ್ಬ ಸಿಬ್ಬಂದಿಯನ್ನು **(Web Designer)** ಆಗಿ ವಿಶ್ವವಿದ್ಯಾಲಯದ ಆಂತರಿಕ ಸಂಪನ್ಮೂಲದಿಂದ ನೇಮಿಸಿಕೊಂಡಿದ್ದು, ಇವರ ಸಂಚಿತ ಮೊತ್ತ **30,000/–** ರೂ. ಗಳಿಗೆ ನಿಗದಿಪಡಿಸಿದ್ದು, ಘಟನೋತ್ತರ ಅನುಮೋದನೆಗಾಗಿ ದಿ: 09.06.2023 ರಂದು ನಡೆದ ಹಣಕಾಸು ಸಮಿತಿಯ 43ನೇ ಸಭೆಯಲ್ಲಿ ಮಂಡಿಸಿದ್ದು, ಸಭೆಯು ಆಂತರಿಕ ಸಂಪನ್ಮೂಲದಿಂದ ತಾತ್ಕಾಲಿಕವಾಗಿ ಸೇವೆಯನ್ನು ಪಡೆಯಲು ಒಪ್ಪಿದ್ದು, **ಈ ಬಗ್ಗೆ ಪ್ರಶಾಸನ ಸಮಿತಿಯ ನಿರ್ಣಯಕ್ಕಾಗಿ ಮಂಡಿಸಿದೆ.** |
| ನಿರ್ಣಯ | **ವಿಶ್ವವಿದ್ಯಾಲಯದ ಆಂತರಿಕ ಸಂಪನ್ಮೂಲದಿಂದ ತಾತ್ಕಾಲಿಕವಾಗಿ 6 ತಿಂಗಳ ಅವಧಿಗೆ ಮಾತ್ರ ಸೇವೆಯನ್ನುಪಡೆಯಲು ಅನುಮೋದಿಸಿತು. ಅಗತ್ಯಕ್ಕನುಗುಣವಾಗಿ ಸಿಬ್ಬಂದಿಗಳ ನಿಯೋಜನೆಯನ್ನು ಹಿಂಪಡೆಯಲು ಸಭೆಯು ಸೂಚಿಸಿತು.** |

| | |
|---|---|
| **ವಿಷಯ 05** | **2023-24ನೇ ಸಾಲಿನ ಕ್ರಿಯಾ ಯೋಜನೆಯನ್ನು ಅನುಮೋದಿಸುವ ಬಗೆಗೆ.** |
| **ಟಿಪ್ಪಣಿ** | ನೇ ಸಾಲಿನ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಿ, ದಿ: 09.06.2023 ರಂದು ನಡೆದ ಹಣಕಾಸು ಸಮಿತಿಯ 43ನೇ ಸಭೆಯಲ್ಲಿ ಮಂಡಿಸಿದ್ದು ಸಭೆಯು ಕ್ರಿಯಾಯೋಜನೆಯನ್ನು ಅನುಮೋದಿಸಿ, ಹಾಗೆಯೇ ವಾರ್ಷಿಕ ಕ್ರಿಯಾ ಯೋಜನೆಯನ್ನು ತಯಾರಿಸುವ ಮುನ್ನ ಬೇರೆ ವಿಶ್ವವಿದ್ಯಾಲಯಗಳ ಮಾದರಿಯನ್ನು ಪಡೆದು, ಅದರಂತೆ ಕ್ರಮವಹಿಸುವುದು ಸೂಕ್ತವೆಂದು ಅಭಿಪ್ರಾಯ ನೀಡಿತು. **ಈ ವಿಷಯವನ್ನು ಪ್ರಶಾಸನ ಸಮಿತಿಯ ನಿರ್ಣಯಕ್ಕಾಗಿ ಮಂಡಿಸಿದೆ.** |
| **ನಿರ್ಣಯ** | **2023-24ನೇ ಸಾಲಿನ ಕ್ರಿಯಾ ಯೋಜನೆಯನ್ನು ಅನುಮೋದಿಸಿಲಾಯಿತು.** |
| **ವಿಷಯ 06** | **ನ್ಯಾಕ್‌ಗೆ ಸಂಬಂಧಿಸಿದ ಖರ್ಚು- ವೆಚ್ಚಗಳನ್ನು ಅನುಮೋದಿಸುವ ಬಗೆಗೆ.** |
| **ಟಿಪ್ಪಣಿ** | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ನ್ಯಾಕ್ ಕಮಿಟಿಯು ಭೇಟಿ ನೀಡಿದ್ದರಿಂದ ಪೂರ್ವಭಾವಿಯಾಗಿ ಮೂಲ ಸೌಕರ್ಯಗಳ ಹಾಗೂ ಸಿದ್ಧತೆಗಾಗಿ ಅಂದಾಜು ರೂ. **50,51,875/-** ವೆಚ್ಚವಾಗಿದ್ದು ದಿ: 09.06.2023 ರಂದು ನಡೆದ ಹಣಕಾಸು ಸಮಿತಿಯ 43ನೇ ಸಭೆಯು ಇದನ್ನು ಅನುಮೋದಿಸಿದ್ದು ಪ್ರಶಾಸನ ಸಮಿತಿಯ ನಿರ್ಣಯಕ್ಕಾಗಿ ಮಂಡಿಸಿದೆ. |
| **ನಿರ್ಣಯ** | **ನ್ಯಾಕ್‌ಗೆ ಸಂಬಂಧಿಸಿದ ಖರ್ಚು- ವೆಚ್ಚಗಳನ್ನು ಅನುಮೋದಿಸಲಾಯಿತು.** |
| **ವಿಷಯ 07** | **ವಿಶ್ವವಿದ್ಯಾಲಯ/ ಅಧೀನ ವಿದ್ಯಾಲಯದ ಮೌಲ್ಯಮಾಪಕರುಗಳ ಭತ್ಯೆಗಳನ್ನು ಹೆಚ್ಚಿಸುವ ಬಗೆಗೆ.** |
| **ಟಿಪ್ಪಣಿ** | ವಿಶ್ವವಿದ್ಯಾಲಯವು ಇಲ್ಲಿಯವರೆಗೆ ಮೌಲ್ಯ ಮಾಪಕರುಗಳಿಗೆ ಭತ್ಯೆಗಳನ್ನು (ಪ್ರಯಾಣ/ ಮೌಲ್ಯಮಾಪನ/ಸ್ಥಳೀಯ ಭತ್ಯೆ/ದಿನ ಭತ್ಯೆ/ಗೌರವ ಸಂಭಾವನೆ(ಪಿ.ಹೆಚ್.ಡಿ), ಸರ್ಕಾರವು ನಿಗದಿಪಡಿಸಿರುವ ಭತ್ಯೆಗಳಿಗಿಂತ ಕಡಿಮೆ ದರದಲ್ಲಿ ಸಂಪನ್ಮೂಲವನ್ನು ಆಧರಿಸಿ ನಿರ್ವಹಣೆ ಮಾಡುತ್ತಿದೆ. ಪ್ರಸ್ತುತ ಸರ್ಕಾರದ ನಿಯಮಾನುಸಾರ ಹಾಗೂ ಹಲವು ವಿಶ್ವವಿದ್ಯಾಲಯವು ಸಂಬಂಧಿಸಿದ ವಿಷಯಗಳಿಗೆ ಈಗಾಗಲೇ ನಿಗದಿಪಡಿಸಿರುವ ಭತ್ಯೆಯಂತೆ ಪರಿಷ್ಕರಿಸ ಬೇಕಿದೆ. ಈ ಸಂಬಂಧ ಉಪ ಸಮಿತಿ ರಚಿಸಿ ಅದರಂತೆ ಜಾರಿಗೆ ತರಲು ದಿ: 09.06.2023 ರಂದು ನಡೆದ ಹಣಕಾಸು ಸಮಿತಿಯ 43ನೇ ಸಭೆಯಲ್ಲಿ ಮಂಡಿಸಿದ್ದು ಸಭೆಯು ಈ ಕೆಳಗಿನಂತೆ ತೀರ್ಮಾನಿಸಿದೆ. **'ಸಮಗ್ರವಾಗಿ ಚರ್ಚಿಸಿದ ನಂತರ ಬೆಂಗಳೂರು ವಿಶ್ವವಿದ್ಯಾಲಯ (ಜ್ಞಾನ ಭಾರತಿ) ಮತ್ತು ತುಮಕೂರು ವಿಶ್ವವಿದ್ಯಾಲಯದಲ್ಲಿ ಅಳವಡಿಸಿಕೊಂಡಿರುವಂತೆ, ಪರೀಕ್ಷಾಂಗಕ್ಕೆ ಸಂಬಂಧಿಸಿದ ಎಲ್ಲಾ ರೀತಿಯ ಭತ್ಯೆಗಳನ್ನು ಅಳವಡಿಸಿಕೊಂಡು ವಿಸ್ತರಿಸಲು ಒಪ್ಪಿತು. ಮುಂದುವರೆದು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕಾಯ್ದೆ, ವೃಂದ ಮತ್ತು ನೇಮಕಾತಿ ನಿಯಮಾಳಿಯ ಪ್ರಕಾರ ಕುಲಸಚಿವ(ಮೌಲ್ಯಮಾಪನ) ಹುದ್ದೆಯಿದ್ದು, ಈಗಿರುವ ಪರೀಕ್ಷಾ ನಿಯಂತ್ರಕ ಹುದ್ದೆಯ ಬದಲಾಗಿ ಕುಲಸಚಿವ(ಪರೀಕ್ಷಾಂಗ) ಎಂದು ಮಾರ್ಪಡಿಸಲು ಸೂಚಿಸಿತು.'**<br><br>**ಈ ಬಗ್ಗೆ ಪ್ರಶಾಸನ ಸಮಿತಿಯ ನಿರ್ಣಯಕ್ಕಾಗಿ ಮಂಡಿಸಿದೆ.** |
| **ನಿರ್ಣಯ** | **ವಿಷಯದ ಬಗ್ಗೆ ವಿವರವಾಗಿ ಚರ್ಚಿಸಿ, ಪರೀಕ್ಷಾ ಕಾರ್ಯಗಳು ಗೌಪ್ಯವಾಗಿ ನಡೆಯಬೇಕಿರುವುದರಿಂದ ವಿಶ್ವವಿದ್ಯಾಲಯದಲ್ಲಿ ಪ್ರತ್ಯೇಕವಾಗಿ ಪರೀಕ್ಷಾಂಗವನ್ನು ಸ್ಥಾಪಿಸಿ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲು ವಿಸ್ತೃತ ಕ್ರಿಯಾಯೋಜನೆಯೊಂದಿಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಹಾಗೂ ಅಲ್ಲಿಯವರೆಗೆ ಮೌಲ್ಯಮಾಪನ ಸಮಯದಲ್ಲಿ ತಾತ್ಕಾಲಿಕವಾಗಿ ಸಮೀಪದ ಕಟ್ಟಡವನ್ನು ಒಂದು ತಿಂಗಳ ಅವಧಿಗೆ ಬಾಡಿಗೆಗೆ ಪಡೆದು ಮೌಲ್ಯಮಾಪನ ಪ್ರಕ್ರಿಯೆಯನ್ನು ನಡೆಸಲು ತೀರ್ಮಾನಿಸಲಾಯಿತು. ಅಲ್ಲದೇ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಅಧಿನಿಯಮ – 2009ಕ್ಕೆ ತಿದ್ದುಪಡಿ ತಂದು ಕುಲಸಚಿವ(ಮೌಲ್ಯಮಾಪನ) ಹುದ್ದೆಯ ಭರ್ತಿಗೆ ಕ್ರಮ ವಹಿಸಲು ಸಭೆಯು ಸೂಚಿಸಿ ಪರೀಕ್ಷಾ ಕಾರ್ಯಕ್ಕೆ ಸಂಬಂದಿಸಿದ ಭತ್ಯೆಗಳನ್ನು ನೀಡಲು ಸಭೆಯು ಅನುಮೋದಿಸಿತು.** |
| **ವಿಷಯ 08** | **ಕಾಲೇಜುಗಳಿಗೆ ಸಂಯೋಜನೆಯನ್ನು ನೀಡುವ ಬಗ್ಗೆ.** |
| **ಟಿಪ್ಪಣಿ** | ಸರ್ಕಾರದ ಆದೇಶ ಸಂಖ್ಯೆ: ED 47 UNE 2023, ದಿ: 15.06.2023 ರಂತೆ ಎಲ್ಲಾ ಸಂಯೋಜನೆಯ ಪ್ರಸ್ತಾವನೆಗಳನ್ನು UUCMS ಪೋರ್ಟಲ್ ಮೂಲಕ ಆನ್‌ಲೈನ್ ನಲ್ಲಿಯೇ ಸರ್ಕಾರಕ್ಕೆ |

ಸಲ್ಲಿಸಬೇಕು. ಈ ಹಿನ್ನೆಲೆಯಲ್ಲಿ ವಿಶ್ವವಿದ್ಯಾಲಯವು 2023-24 ನೇ ಸಾಲಿಗೆ ಸಂಸ್ಕೃತ ಕಾಲೇಜುಗಳ ಸಂಯೋಜನೆ/ಹೊಸದಾಗಿ ಮಾನ್ಯತೆ/ಹೊಸಕಾಲೇಜುಗಳಿಗೆ ಅನುಮತಿ/ಸಂಯೋಜನೆಗಾಗಿ ಸ್ಥಳೀಯ ಪರಿಶೀಲನಾ ಸಮಿತಿಯನ್ನು ರಚಿಸಿತ್ತು. ಸ್ಥಳೀಯ ಪರಿಶೀಲನಾ ಸಮಿತಿಯು ಆಯಾ ಕಾಲೇಜುಗಳಿಗೆ ಭೇಟಿ ನೀಡಿ UUCMS ಪೋರ್ಟಲ್ ನಲ್ಲಿ ವರದಿ ಸಲ್ಲಿಸಿದ್ದು, ವಿವರ ಈ ಕೆಳಕಂಡಂತಿದೆ.

ಸಂಯೋಜನೆ ನವೀಕರಣ: 28
ನೂತನ ಸಂಯೋಜನೆ: 03
ಒಟ್ಟು ಕಾಲೇಜುಗಳು: 31

| ಕ್ರ. ಸಂ. | ಕಾಲೇಜಿನ ಹೆಸರು |
|---|---|
| 1 | ಶ್ರೀ ಮನ್ಮಹಾರಾಜಾ ಸಂಸ್ಕೃತ ಕಾಲೇಜು, ನ್ಯೂ ಸಯ್ಯಾಜಿರಾವ್ ರೋಡ್, ಮೈಸೂರು–24 |
| 2 | ಶ್ರೀ ಸರ್ಕಾರಿ ಸಂಸ್ಕೃತ ಕಾಲೇಜು ಮೇಲುಕೋಟೆ,571431 |
| 3 | ಶ್ರೀ ಕಾಲಭೈರವೇಶ್ವರ ಸಂಸ್ಕೃತ ವೇದ ಆಗಮ ಕಾಲೇಜು, ಶ್ರೀ ಆದಿಚುಂಚನಗಿರಿ ಕ್ಷೇತ್ರ, ನಾಗಮಂಗಲ ತಾಲ್ಲೂಕು ಮಂಡ್ಯ 571811 |
| 4 | ಶ್ರೀ ಮಲೆಮಹದೇಶ್ವರ ಸಂಸ್ಕೃತ ಕಾಲೇಜು, ಕೊಳ್ಳೇಗಾಲ, ಚಾಮರಾಜನಗರ ಜಿಲ್ಲೆ |
| 5 | ಶ್ರೀ ಶಂಕರ ವಿಲಾಸ ಸಂಸ್ಕೃತ ಕಾಲೇಜು, ಶ್ರೀ ಅರಮನೆ ಜಪದಕಟ್ಟೆಮಠ, ಶಂಕರಮಠದ ರಸ್ತೆ, 2ನೇ ಅಡ್ಡರಸ್ತೆ, ಖಿಲ್ಲೆಮೊಹಲ್ಲಾ, ಮೈಸೂರು–57000 |
| 6 | ಜೆ. ಎಸ್. ಎಸ್. ಸಂಸ್ಕೃತ ಕಾಲೇಜು, ಸುತ್ತೂರು –571 129, ನಂಜನಗೂಡು ತಾ॥, ಮೈಸೂರು ಜಿ॥ |
| 7 | ಶ್ರೀಮನ್ಮಧ್ವಸಿದ್ಧಾಂತ ಪ್ರಬೋಧಿನೀ ಸಂಸ್ಕೃತ ಕಾಲೇಜು, ಉಡುಪಿ – 576 10 |
| 8 | ಶ್ರೀ ಮೇಧಾ ದಕ್ಷಿಣಾಮೂರ್ತಿ ವೇದಭವನ ಸಂಸ್ಕೃತ ಕಾಲೇಜು, ಗೋಕರ್ಣ, ಕುಮಟ ತಾಲ್ಲೂಕು, ಉತ್ತರಕನ್ನಡ ಜಿಲ್ಲೆ. |
| 9 | ಶ್ರೀ ಶ್ರೀಮಾತಾ ಸಂಸ್ಕೃತ ಕಾಲೇಜು. ಉಮ್ಮಚಗಿ, ಯಲ್ಲಾಪುರ ತಾಲೂಕು, ಉತ್ತರ ಕನ್ನಡ ಜಿಲ್ಲೆ – 581 347 |
| 10 | ಶ್ರೀ ರಾಜರಾಜೇಶ್ವರೀ ಸಂಸ್ಕೃತ ಕಾಲೇಜು, ಸೋಂದಾ ಸ್ವರ್ಣವಲ್ಲೀ ಮಠ, ಮಠದೇವಳ ಅಂಚೆ –581336 ಶಿರಸಿ ತಾಲ್ಲೂಕು, ಉ.ಕ. ಜಿಲ್ಲೆ |
| 11 | ಶ್ರೀ ರಾಘವೇಂದ್ರ ಭಾರತೀ ಸವೇದ ಸಂಸ್ಕೃತ ಕಾಲೇಜು, ಸುಬ್ರಹ್ಮಣ್ಯ ಸುರಕಟ್ಟೆ, ಹೊನ್ನಾವರ – 581 334, ಉ.ಕ. ಜಿಲ್ಲೆ |
| 12 | ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜು, ಪಂಪಮಹಾಕವಿ ರಸ್ತೆ ಚಾಮರಾಜಪೇಟೆ, ಬೆಂಗಳೂರು–560018 |
| 13 | ಪೂರ್ಣಪ್ರಜ್ಞ ವಿದ್ಯಾಪೀಠ ಸಂಸ್ಕೃತ ಕಾಲೇಜು, ಪೂರ್ಣಪ್ರಜ್ಞ ನಗರ, ಕತ್ತರಿಗುಪ್ಪೆ, ಮುಖ್ಯರಸ್ತೆ, ಬೆಂಗಳೂರು–560 028 |
| 14 | ಶ್ರೀ ನಿರ್ವಾಣಸ್ವಾಮಿ ಸಂಸ್ಕೃತ ಕಾಲೇಜು, ಶ್ರೀದೇಗುಲಮಠ, ಕನಕಪುರ–562117 ರಾಮನಗರ ಜಿಲ್ಲೆ. |
| 15 | ಶ್ರೀ ರುದ್ರೇಶ್ವರ ಸಂಸ್ಕೃತ ಕಾಲೇಜು, ರಾಜಘಟ್ಟ ಗ್ರಾಮ, ಕಸಬಾ ಹೋಬಳಿ, ದೊಡ್ಡಬಳ್ಳಾಪುರ ತಾ॥, ಬೆಂಗಳೂರು ಗ್ರಾಮಾಂತರ ಜಿಲ್ಲೆ – 561203 |
| 16 | ಶ್ರೀ ಬಸವೇಶ್ವರ ಸಂಸ್ಕೃತ ಕಾಲೇಜು, ಪವಾಡ ಶ್ರೀ ಬಸವಣ್ಣ ದೇವರಮಠ, ನೆಲಮಂಗಲ, ಬೆಂಗಳೂರು ಗ್ರಾಮಾಂತರ ಜಿಲ್ಲೆ – |

| | |
|---|---|
| 17 | ಶ್ರೀ ವೇದವಿಜ್ಞಾನ ಶೋಧ ಸಂಸ್ಥಾನ (ರಿ) ಸಂಸ್ಕೃತ ಕಾಲೇಜು ಚನ್ನೇನಹಳ್ಳಿ, ಮಾಗಡಿ ರಸ್ತೆ, ಬೆಂಗಳೂರು–562130 |
| 18 | ಪೂರ್ಣಪ್ರಜ್ಞ ವಿದ್ಯಾಪೀಠ ವೇದಾಂತ ಗುರುಕುಲಂ ಸಂಸ್ಕೃತ ಕಾಲೇಜು, ಕತ್ತರಿಗುಪ್ಪೆ ಮುಖ್ಯರಸ್ತೆ, ಬೆಂಗಳೂರು–560 028 |
| 19 | ವೇದವಿಜ್ಞಾನ ಮಹಾವಿದ್ಯಾಪೀಠ ವೇದ ಆಗಮ ಸಂಸ್ಕೃತ ಮಹಾ ಪಾಠಶಾಲೆ, ವೇದ ವಿಭಾಗ, ಕನಕಪುರ ರಸ್ತೆ, ಉದಯಪುರ, ಬೆಂಗಳೂರು,560082 |
| 20 | ಶ್ರೀ ಸಿದ್ಧಲಿಂಗೇಶ್ವರ ವೇದ ಸಂಸ್ಕೃತ ಕಾಲೇಜು, ಸಿದ್ಧಗಂಗಾ ಮಠ, ತುಮಕೂರು –572 104 |
| 21 | ಶ್ರೀ ಫಿರಂಗಿಸ್ವಾಮಿ ಸಂಸ್ಕೃತ ಕಾಲೇಜು, ಅಂಕನಹಳ್ಳಿ ಮಠ, ಕುಣಿಗಲ್ ತಾಲ್ಲೂಕು, ತುಮಕೂರು ಜಿಲ್ಲೆ |
| 22 | ಶ್ರೀ ಜಗದ್ಗುರು ಗುರುಬಸವೇಶ್ವರ ಸಂಸ್ಕೃತ ಕಾಲೇಜು, ಶ್ರೀ ಬೆಕ್ಕಿನಕಲ್ಮಠ, ಶ್ರೀ ಮಲ್ಲಿಕಾರ್ಜುನ ಮುರುಘರಾಜೇಂದ್ರ ವೃತ್ತ, ಶಿವಮೊಗ್ಗ–577202 |
| 23 | ಶ್ರೀ ಪೂರ್ಣ ಪ್ರಜ್ಞಾ ಸಂಸ್ಕೃತ ಕಾಲೇಜು. ರಾಜೇಂದ್ರ ನಗರ, ಚಿತ್ರದುರ್ಗ |
| 24 | ಶ್ರೀ ಚನ್ನಮಲ್ಲಿಕಾರ್ಜುನಸ್ವಾಮಿ ಸಂಸ್ಕೃತ ಕಾಲೇಜು, ಹಿರೇಕಲ್ಮಠ, ಹೊನ್ನಾಳಿ, ದಾವಣಗೆರೆ ಜಿಲ್ಲೆ – 577217 |
| 25 | ಶ್ರೀ ಲಕ್ಷ್ಮೀನರಸಿಂಹ ಸಂಸ್ಕೃತ ಕಾಲೇಜು, ಜಮಖಂಡಿ – 587 301 ಬಾಗಲಕೋಟೆ ಜಿಲ್ಲೆ |
| 26 | ಶ್ರೀ ಗಜಾನನ ಸಂಸ್ಕೃತ ಕಾಲೇಜು, ಸೂಡಿ, ರೋಣ ತಾಲ್ಲೂಕು, ಗದಗ ಜಿಲ್ಲೆ |
| 27 | ಸಿ. ಎಲ್. ವೈ. ಸಂಸ್ಕೃತ ಕಾಲೇಜು, ಕುಮಾರೇಶ್ವರ ನಗರ, ಬೆಳಗಾವಿ ರಸ್ತೆ, ಧಾರವಾಡ – 580 008. |
| 28 | ಶ್ರೀ ಗುರುಸಾರ್ವಭೌಮ ವೇದ ಸಂಸ್ಕೃತ ಕಾಲೇಜು, ಎನ್. ಎಸ್.ಆರ್. ಎಸ್. ಮಠ, ಜವಾಹರ ನಗರ, ರಾಯಚೂರು |

## ನೂತನ ಸಂಯೋಜನೆ

| | | |
|---|---|---|
| 1 | ಶ್ರೀಮದ್ ಆದಿಜಗದ್ಗುರು ಶ್ರೀ ಸಿದ್ಧಲಿಂಗೇಶ್ವರ ಮಹಾಸ್ವಾಮಿಗಳ ಸಂಸ್ಕೃತ ಮತ್ತು ವೇದ ಮಹಾವಿದ್ಯಾಲಯ, ಮಧುರಖಂಡಿ, ಕಮರೀಮಠ, ನಂಧೀಶ್ವರ, ಅಥಣಿ, ಬೆಳಗಾವಿ ಜಿಲ್ಲೆ, | **BA** |
| 2 | ವೇದನಿಧಿ ಆರ್ಥೊಡಕ್ಸ್ ಇಂಡಿಕ್ ಕಾಲೇಜ್ ಆಫ್ ಎಕ್ಸಲೆನ್ಸ್ (VOICE), 60, ಪ್ರಜ್ಞಾನ ಘನಮ್, 2 ನೇಕ್ರಾಸ್, ಗೌರಿಶಂಕರ ನಗರ, ಮೈಸೂರು–570025 | **BA** |
| 3 | ಆನಂದ ಜ್ಞಾನ ವಿಜ್ಞಾನ ಸಂಸ್ಕೃತ ಕಾಲೇಜು, ಚಂದ್ರಮೌಳಿ ರಸ್ತೆ, ಕೃಷ್ಣರಾಜನಗರ, ಮೈಸೂರು ಜಿಲ್ಲೆ–571602 | **BA** |

ಈ 31 ಕಾಲೇಜುಗಳಿಗೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಸಂಯೋಜನೆಯನ್ನು ನೀಡಲು ಸರ್ಕಾರಕ್ಕೆ ಶಿಫಾರಸ್ಸು ಮಾಡಲು ದಿ: 19.07.2023 ರಂದು ನಡೆದ ಪ್ರಶಿಕ್ಷಣ ಪರಿಷತ್ತಿನ 35ನೇ ಸಭೆಯು ಅನುಮೋದಿಸಿದೆ.

ಶ್ರೀ ಕಬೀರಾನಂದ ಸಂಸ್ಕೃತ ಕಾಲೇಜು, ಚಿತ್ರದುರ್ಗ ಈ ಕಾಲೇಜನ್ನು ಸ್ಥಗಿತಗೊಳಿಸುವುದಾಗಿ ಆಡಳಿತ ಮಂಡಳಿಯು ಪತ್ರಿಸಿರುವುದರಿಂದ ಈ ಕಾಲೇಜಿಗೆ ಸಂಯೋಜನೆ ನೀಡಿರುವುದಿಲ್ಲ, ಹಾಗೂ ಸಮೀಪದ ಬೇರೆ ಕಾಲೇಜಿನಿಂದ ನಿರಾಕ್ಷೇಪಣೆಯನ್ನು ಪಡೆದು ಇಲ್ಲಿನ ವಿದ್ಯಾರ್ಥಿಗಳನ್ನು ಆ ಕಾಲೇಜಿಗೆ ವರ್ಗಾಯಿಸುವ ಮತ್ತು ವಿಶ್ವವಿದ್ಯಾಲಯಕ್ಕೆ ಪಾವತಿಸಬೇಕಾದ ಮೊತ್ತ ಬಾಕಿಯಿದ್ದಲ್ಲಿ ಅದನ್ನು ಪಾವತಿಸಿದ ನಂತರ ಸದರಿ ಕಾಲೇಜಿನ ಸ್ಥಗಿತಕ್ಕೆ ಕ್ರಮವಹಿಸಲು ದಿ: 19.07.2023 ರಂದು ನಡೆದ ಪ್ರಶಿಕ್ಷಣ ಪರಿಷತ್ತಿನ 35ನೇ ಸಭೆಯು ಅನುಮೋದಿಸಿದೆ.

**ಈ ವಿಷಯವನ್ನು ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ.**

| | |
|---|---|
| | |
| ನಿರ್ಣಯ | **ಸಂಯೋಜನಾ ಶುಲ್ಕವನ್ನು ಹೆಚ್ಚಿಸಿ, ಸ್ಥಳೀಯ ತಪಾಸಣಾ ಸಮಿತಿಯ ಭತ್ಯೆಯನ್ನು ವಿಶ್ವವಿದ್ಯಾಲಯದಿಂದಲೇ ಪಾವತಿಸಲಾಗುವುದು ಎಂದು ಮಾನ್ಯ ಕುಲಪತಿಗಳು ಸಭೆಗೆ ತಿಳಿಸಿದರು. ಸಭೆಯು ಅಲ್ಪ ಪ್ರಮಾಣದಲ್ಲಿ ಶುಲ್ಕ ಹೆಚ್ಚಿಸಲು ಮತ್ತು 28 ಕಾಲೇಜುಗಳ ಸಂಯೋಜನೆ ನವೀಕರಣ ಮತ್ತು 3 ಹೊಸ ಕಾಲೇಜುಗಳಿಗೆ ಸಂಯೋಜನೆ ನೀಡಲು ಸಭೆಯು ಅನುಮೋದಿಸಿತು. UUCMS Portal ನಲ್ಲಿ ಪ್ರಸ್ತಾವನೆ ಸಲ್ಲಿಸಿರುವುದನ್ನು ಅನುಮೋದಿಸಲಾಯಿತು.** |
| **ವಿಷಯ 09**<br><br>**ಟಿಪ್ಪಣಿ** | **2021ನೇ ಸಾಲಿನ ಗ್ರಂಥ ಪುರಸ್ಕಾರವನ್ನು ನೀಡುವ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು 2010-11ನೇ ಸಾಲಿನಿಂದ "ಗ್ರಂಥ ಪುರಸ್ಕಾರ" ಯೋಜನೆಯನ್ನು ಹಮ್ಮಿಕೊಂಡು, ಉತ್ತಮ ಸಂಸ್ಕೃತ ಗ್ರಂಥಗಳಿಗೆ ಪುರಸ್ಕಾರವನ್ನು ನೀಡುತ್ತಾ ಬಂದಿದೆ. ಈ ಪುರಸ್ಕಾರವು ಪ್ರಶಸ್ತಿ, ಫಲಕ, ಶಾಲು ಮತ್ತು ರೂ. 10000/- ಗೌರವಧನವನ್ನು ಒಳಗೊಂಡಿದೆ. ಪ್ರಸ್ತುತ ಸಂಸ್ಕೃತ ಗ್ರಂಥ ಪುರಸ್ಕಾರ - 2021 ಕ್ಕೆ ಕೆಳಕಂಡ ವಾಙ್ಮಯ ಪ್ರಕಾರಗಳಲ್ಲಿ ಕಳೆದ ಐದು ವರ್ಷಗಳಲ್ಲಿ ಪ್ರಕಟವಾದ ಗ್ರಂಥಗಳನ್ನು ಆಹ್ವಾನಿಸಿ, ಅರ್ಹ ಲೇಖಕರಿಗೆ ಪುರಸ್ಕಾರ ನೀಡಲು ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | **2021ನೇ ಸಾಲಿನ ಗ್ರಂಥ ಪುರಸ್ಕಾರವನ್ನು ನೀಡಲು ಅನುಮೋದಿಸಿ, ಅಧ್ಯಾಪಕರು/ಲೇಖಕರು ತಮ್ಮ ತಜ್ಞತೆಯ ವಿಷಯಗಳಲ್ಲಿ ರಚಿಸಿದ ಗ್ರಂಥಗಳನ್ನು ಮಾತ್ರ ಪುರಸ್ಕಾರಕ್ಕೆ ಪರಿಗಣಿಸುವಂತೆ ಸಭೆಯು ಸೂಚಿಸಿತು.** |
| **ವಿಷಯ 10**<br><br>**ಟಿಪ್ಪಣಿ** | **ಸಾಂದರ್ಭಿಕ ರಜೆಯನ್ನು 10 ದಿವಸಗಳಿಗೆ ಇಳಿಸುವ ಬಗ್ಗೆ.**<br>ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಆಸುಇ 02 ಹೆಚ್‌ಹೆಚ್‌ಎಲ್ 2019, ದಿ: 13.6.2019ರಲ್ಲಿ ವಾರದ 4ನೇ ಶನಿವಾರವನ್ನು ಸಾರ್ವತ್ರಿಕ ರಜಾ ದಿನವಾಗಿ ಘೋಷಿಸಿ, ಸರ್ಕಾರಿ ನೌಕರರಿಗೆ ನಿಗದಿಪಡಿಸಿರುವ 15 ದಿನಗಳ ಸಾಂದರ್ಭಿಕ ರಜೆಯನ್ನು 10 ದಿನಗಳಿಗೆ ಇಳಿಸಿ ಅಧಿಸೂಚಿಸಿದೆ. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ಇದನ್ನು ಈಗಾಗಲೇ ರಾಜ್ಯವೇತನ ಶ್ರೇಣಿಯ ಸಿಬ್ಬಂದಿಗಳಿಗೆ ಅನ್ವಯಿಸಲಾಗಿದ್ದು, ಸದರಿ ಅಧಿಸೂಚನೆಯು ಎಲ್ಲಾ ನೌಕರರಿಗೂ ಅನ್ವಯವಾಗುವುದರಿಂದ ವಿಶ್ವವಿದ್ಯಾಲಯದ ಎಲ್ಲಾ ಸಿಬ್ಬಂದಿಗಳಿಗೆ ಅನ್ವಯವಾಗುವಂತೆ ತಿಂಗಳ ಎರಡನೇ ಮತ್ತು ನಾಲ್ಕನೇ ಶನಿವಾರದಂದು ರಜೆಯನ್ನು ನೀಡಿ 15 ದಿನಗಳ ಸಾಂದರ್ಭಿಕ ರಜೆಯನ್ನು 10 ದಿನಗಳಿಗೆ ಇಳಿಸಬೇಕಿರುತ್ತದೆ. ಆದ್ದರಿಂದ ಈ ವಿಷಯವನ್ನು ಪ್ರಶಾಸನ ಸಮಿತಿಯ ಅನುಮೋದನೆಗೆ ಮಂಡಿಸಿದೆ. |
| ನಿರ್ಣಯ | **ಸರ್ಕಾರಿ ನಿಯಮಗಳಂತೆ ಎರಡನೇ ಮತ್ತು ಮೂರನೇ ಶನಿವಾರದ ರಜೆಯನ್ನು ಎಲ್ಲ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವರ್ಗದವರಿಗೆ ವಿಸ್ತರಿಸಿ ಸಾಂದರ್ಭಿಕ ರಜೆಯನ್ನು ಸರ್ಕಾರಿ ನಿಯಮದಂತೆ 10 ದಿನಗಳಿಗೆ ಇಳಿಸಲು ಸಭೆಯು ನುಮೋದಿಸಿತು.** |
| **ವಿಷಯ 11**<br><br>**ಟಿಪ್ಪಣಿ** | **Nilekni Centre at AI4Bharat, IIT Madras ಸಂಸ್ಥೆಗೆ ಸಂಸ್ಕೃತ ಧ್ವನಿ ದತ್ತಾಂಶ ಸಂಗ್ರಹ ಯೋಜನೆಗೆ ಸಹಯೋಗ ನೀಡುವ ಬಗ್ಗೆ.**<br>Nilekni Centre at AI4Bharat, ಸಂಸ್ಥೆಯು IIT Madras ನಲ್ಲಿ Natural Language ಬಗ್ಗೆ ಕಾರ್ಯ ನಿರ್ವಹಿಸುತ್ತಿರುವ ಸಂಶೋಧನಾ ಕೇಂದ್ರವಾಗಿದ್ದು, ಪ್ರಸ್ತುತ ಈ ಕೇಂದ್ರವು ಭಾರತ ಸರ್ಕಾರದ ವಿದ್ಯುನ್ಮಾನ ಮತ್ತು ಮಾಹಿತಿ ತಂತ್ರಜ್ಞಾನ ಇಲಾಖೆಯ ಡಿಜಿಟಲ್ ಇಂಡಿಯಾ ಭಾಷಿಣಿ ಯೋಜನೆಯಲ್ಲಿ ಸಂಸ್ಕೃತ ಧ್ವನಿ ದತ್ತಾಂಶ ಸಂಗ್ರಹ ಮತ್ತು ಲಿಪೀಕರಣ ಯೋಜನೆಯನ್ನು ನಿರ್ವಹಿಸುತ್ತಿದ್ದು, ಈ ಕಾರ್ಯಕ್ಕೆ ವಿಶ್ವವಿದ್ಯಾಲಯದ ಸಹಯೋಗವನ್ನು ಕೋರಿದೆ.<br><br>ಈ ಯೋಜನೆಯು ಈ ಕೆಳಕಂಡ ಸಹಯೋಗವನ್ನು ಒಳಗೊಂಡಿರುತ್ತದೆ.<br>1. ವಿಶ್ವವಿದ್ಯಾಲಯದಿಂದ ಭಾಗವಹಿಸುವ ಸ್ವಯಂ ಸೇವಕರ ಸಂಚಾರ ವ್ಯವಸ್ಥೆ.<br>2. ಸ್ವಯಂ ಸೇವಕರಿಗೆ ಅಗತ್ಯವಾದ ಭೌತಿಕ ಸೌಲಭ್ಯಗಳನ್ನು ಕ್ಯಾಂಪಸ್ ನಲ್ಲಿ ಒದಗಿಸುವುದು. |

ಈ ಯೋಜನೆಯಲ್ಲಿ ಸಂಗ್ರಹಿಸುವ ದತ್ತಾಂಶವು CC BY 4.0 ಲೈಸೆನ್ಸ್ ಅಡಿಯಲ್ಲಿ ಲಭ್ಯವಿರುತ್ತದೆ ಮತ್ತು ಯಾವುದೇ ಮಾಧ್ಯಮದಲ್ಲಿ ನಕಲಿಸುವ ಮತ್ತು ವಿತರಿಸುವ ಹಕ್ಕನ್ನು ಡಿಜಿಟಲ್ ಇಂಡಿಯಾ ಭಾಷಿಣಿಯು ಹೊಂದಿರುತ್ತದೆ.

ಸದರಿ ವಿಷಯದ ಬಗ್ಗೆ ಮೇಲ್ಕಂಡ ಸಂಸ್ಥೆಯ ಜೊತೆ ಒಡಂಬಡಿಕೆ ಮಾಡಿಕೊಳ್ಳುವ ಬಗ್ಗೆ ಪ್ರಶಾಸನ ಸಮಿತಿಯ ನಿರ್ಣಯಕ್ಕಾಗಿಮಂಡಿಸಿದೆ.

ನಿರ್ಣಯ

**ಸಭೆಯು ಈ ಬಗ್ಗೆ ವಿಸ್ತಾರವಾಗಿ ಚರ್ಚಿಸಿತು. Nilekni Centre at AI4Bharat, IIT Madras ಸಂಸ್ಥೆಯು ವಿದ್ಯಾರ್ಥಿಗಳಿಂದ/ಸ್ವಯಂ ಸೇವಕರಿಂದ ಸಂಗ್ರಹಿಸುವ ದತ್ತಾಂಶದ ಗೌಪ್ಯತೆ ಮತ್ತು ಖಾಸಗಿತನದ ಹಕ್ಕಿನ ಸಂರಕ್ಷಣೆಯ ಬಗ್ಗೆ ಸಂಬಂಧಿಸಿದ ಸಂಸ್ಥೆಯೊಂದಿಗೆ ಮಾತುಕತೆ ನಡೆಸಿ ಖಚಿತಪಡಿಸಿಕೊಳ್ಳಲು ಸೂಚಿಸಿತು. ಸದರಿ ಯೋಜನೆಯಿಂದ ವಿಶ್ವವಿದ್ಯಾಲಯಕ್ಕೆ ಯಾವುದೇ ಆರ್ಥಿಕ ವೆಚ್ಚವಾಗದಂತೆ ಮತ್ತು ಪ್ರತಿ ದತ್ತಾಂಶಕ್ಕೆ ನಿಗದಿತ ಮೊತ್ತವನ್ನು ಸಂಸ್ಥೆಯಿಂದ ಪಡೆದು, ಸರ್ಕಾರದ ಅನುಮೋದನೆಯೊಂದಿಗೆ ಮುಂದಿನ ಕ್ರಮ ತೆಗೆದುಕೊಳ್ಳಲು ಸಭೆಯು ತೀರ್ಮಾನಿಸಿತು.**

ವಿಷಯ 12

**ಕಾಲೇಜು ಸಂಯೋಜನೆಯ ತಪಾಸಣೆಯ ಸ್ಥಳೀಯ ವಿಚಾರಣಾ ಸಮಿತಿಯ ಅಧ್ಯಕ್ಷರು, ಸದಸ್ಯರು ಮತ್ತು ಸಂಚಾಲಕರ ಗೌರವಧನ ನಿಗದಿಪಡಿಸುವ ಬಗ್ಗೆ.**

**ಟಿಪ್ಪಣಿ**

ರಾಜ್ಯದಲ್ಲಿ ಸಂಸ್ಕೃತ ಸ್ನಾತಕ ಮತ್ತು ಸ್ನಾತಕೋತ್ತರ ಅಧ್ಯಯನಕ್ಕೆ ಎಲ್ಲಾ ಕಾಲೇಜುಗಳು ವಿಶ್ವವಿದ್ಯಾಲಯದ ಸಂಯೋಜನೆ ಪಡೆಯಲು ಆನಲೈನ್ ಮೂಲಕ ಅರ್ಜಿ ಸಲ್ಲಿಸುವುದು ಮತ್ತು ಸ್ಥಳೀಯ ವಿಚಾರಣಾ ಸಮಿತಿಯು ಪರಿವೀಕ್ಷಣೆ ನಡೆಸಿ ವರದಿ ಸಲ್ಲಿಸುವುದನ್ನು ಆದೇಶ ಸಂಖ್ಯೆ: ED 47 UNE 2023, ದಿ: 15.06.2023ರಲ್ಲಿ ಸರ್ಕಾಕರವು ಕಡ್ಡಾಯಗೊಳಿಸಿದೆ. ಅದರಂತೆ ವಿಶ್ವವಿದ್ಯಾಲಯವು ರಚಿಸುವ ಸ್ಥಳೀಯ ವಿಚಾರಣಾ ಸಮಿತಿಯು ಸಂಯೋಜನೆ ಪ್ರಸ್ತಾವನೆಯಂತೆ ಭೌತಿಕ ಪರಿವೀಕ್ಷಣೆಯನ್ನು ನಡೆಸಿ ವರದಿಯನ್ನು ಆನ್ ಲೈನ್ ಮೂಲಕ ನೀಡಬೇಕಿರುತ್ತದೆ. ವಿವಿಧ ವಿಶ್ವವಿದ್ಯಾಲಯಗಳು ಸದರಿ ಸಮಿತಿಯ **ಅಧ್ಯಕ್ಷರು, ಸದಸ್ಯರು ಮತ್ತು ಸಂಚಾಲಕರ ಗೌರವಧನ**ವನ್ನು ಮಂಜೂರು ಮಾಡಿರುವುದನ್ನು ಪರಿಶೀಲಿಸಿ ನಮ್ಮ ವಿಶ್ವವಿದ್ಯಾಲಯದಲ್ಲೂ ಗೌರವಧನ ನಿಗದಿಪಡಿಸಲು ಸಭೆಯ ನಿರ್ದೇಶನ ಕೋರಿ ಮಂಡಿಸಿದೆ.

| | |
|---|---|
| ಅಧ್ಯಕ್ಷರು | |
| ಸದಸ್ಯರು | |
| ಸಂಚಾಲಕರು | |

ನಿರ್ಣಯ

**ಸ್ಥಳೀಯ ತಪಾಸಣಾ ಸಮಿತಿಯಲ್ಲಿ ಭಾಗವಹಿಸುವುದು ಶೈಕ್ಷಣಿಕ ಚಟುವಟಿಕೆಯ ಭಾಗವಾಗಿರುವುದರಿಂದ ಸಾಂಕೇತಿಕವಾಗಿ ಒಂದು ದಿನಕ್ಕೆ ಈ ಕೆಳಗಿನಂತೆ ಗೌರವಧನವನ್ನು ಸಭೆಯು ನಿಗದಿಪಡಿಸಿತು.**

| | |
|---|---|
| ಅಧ್ಯಕ್ಷರು | 1500/- |
| ಸದಸ್ಯರು | 1300/- |
| ಸಂಚಾಲಕರು | 1000/- |

ವಿಷಯ 13

**ವಿಶ್ವವಿದ್ಯಾಲಯದ ಬೋಧಕೇತರ ಸಿಬ್ಬಂದಿಗಳಿಗೆ ಪದೋನ್ನತಿ ನೀಡುವ ಬಗ್ಗೆ.**

**ಟಿಪ್ಪಣಿ**

ವಿಶ್ವವಿದ್ಯಾಲಯದ ಬೋಧಕೇತರ ಸಿಬ್ಬಂದಿಗಳಿಗೆ ಪದೋನ್ನತಿ ನೀಡುವ ಬಗ್ಗೆ ಸರ್ಕಾರವು ವಿಶ್ವವಿದ್ಯಾಲಯದ ವೃಂದ & ನೇಮಕಾತಿ ನಿಯಮ, ಪರಿನಿಯಮಗಳಿಗನುಸಾರವಾಗಿ ಕ್ರಮ ವಹಿಸಲು ಸೂಚಿಸಿದ್ದು, ಅದರಂತೆ ಇಲಾಖಾ ಪದೋನ್ನತಿ ಸಮಿತಿಯನ್ನು ರಚಿಸಲಾಗಿತ್ತು. ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ದಿನಾಂಕ: 10.07.2023ರಂದು ಮಧ್ಯಾಹ್ನ 02.30ಕ್ಕೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಸಿಂಡಿಕೇಟ್ ಹಾಲ್‌ನಲ್ಲಿ ನಡೆದ ಸಭೆಯಲ್ಲಿ ಈ ಕೆಳಗಿನಂತೆ ತೀರ್ಮಾನಿಸಿದೆ.

1. ಅಡುಗೆ ಸಹಾಯಕ ಹುದ್ದೆಯಿಂದ '**ಅಡುಗೆಯವರ**' ಹುದ್ದೆಗೆ ಪದೋನ್ನತಿಗೆ ವೃಂದ & ನೇಮಕಾತಿ ನಿಯಮದಲ್ಲಿ Must have passed 7th Standard in Kannada medium. Minimum 5 years experience in cooking profession. Must have knowledge to

speak, read and write in kannada fluently. For promotion, must have put in 5 years of service in the cadre of Assistant Cook ಎಂದಿದ್ದು, **ಮಂಗಳಾ ಎಂ.** ಅಡುಗೆ ಸಹಾಯಕರು, ಇವರು ಸಿ & ಆರ್‌ನಲ್ಲಿರುವ ಎಲ್ಲಾ ಅರ್ಹತೆಗಳನ್ನು ಪೂರೈಸಿದ್ದು, ಇವರಿಗೆ ಅಡುಗೆ ಸಹಾಯಕರ ಹುದ್ದೆಯಿಂದ '**ಅಡುಗೆಯವರ**' ಹುದ್ದೆಗೆ ಪದೋನ್ನತಿ ನೀಡಲು ಸಮಿತಿಯು ಶಿಫಾರಸ್ಸು ಮಾಡಿದೆ.

| ಕ್ರ ಸಂ | ನೌಕರರ ಹೆಸರು | ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಪದನಾಮ & ವೇತನ ಶ್ರೇಣಿ | ಪದೋನ್ನತಿ ನೀಡುವ ಪದನಾಮ & ವೇತನ ಶ್ರೇಣಿ |
|---|---|---|---|
| 01 | ಮಂಗಳಾ ಎಂ. | ಅಡುಗೆ ಸಹಾಯಕರು<br>21900<br>18600-32600 | ಅಡುಗೆಯವರು.<br>22400<br>18600-32600 |

2. ಗ್ರೂಪ್-ಡಿ ಯಿಂದ ಕಿರಿಯಸಹಾಯಕರ ಹುದ್ದೆಗೆ ಪದೋನ್ನತಿ ನೀಡಲು ನಿಯಮವು - Must have passed SSLC or equivalent examination. Must have passed a Certificate Course in Computer Science Course and also passed Prasidda Sanskrit Pariksha in 'Kavya' held in Traditional System. ಎಂದಿದ್ದು, ಕರ್ನಾಟಕ ಸರ್ಕಾರವು ಕಾಲಕಾಲಕ್ಕೆ ಹೊರಡಿಸುವ ಆದೇಶಗಳನ್ವಯ ಕಿರಿಯ ಸಹಾಯಕರ ಹುದ್ದೆಗೆ ಪಿ.ಯು.ಸಿ ಅಥವಾ ತತ್ಸಮಾನ ಅರ್ಹತೆಯನ್ನು ನಿಗಧಿಪಡಿಸಿರುತ್ತದೆ. ಪ್ರಸ್ತುತದಲ್ಲಿರುವ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ C & R ನಲ್ಲಿ SANSKRIT in SSLC ಎಂದು ಇರುವುದರಿಂದ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ನಡೆಸುವ ಕಾವ್ಯ, ಸಾಹಿತ್ಯ ಇತ್ಯಾದಿ ಪರೀಕ್ಷೆಗಳು SSLC, PUC ಗೆ ಸಮಾನಾಂತರವೇ (Equivalent) ಎಂಬ ಬಗ್ಗೆ ಸರ್ಕಾರದ ಅನುಮತಿ ಪಡೆದು ಮುಂದಿನ ಸೂಕ್ತ ಕ್ರಮ ಕೈಗೊಳ್ಳುವಂತೆ ಡಿ.ಪಿ.ಸಿ. ಸಮಿತಿಯು ನಿರ್ಣಯಿಸಿತು.

3. ಹಿರಿಯ ಸಹಾಯಕರ ಹುದ್ದೆಯಿಂದ ಶಾಖಾಧಿಕಾರಿ ಹುದ್ದೆಗೆ ಪದೋನ್ನತಿ ನೀಡುವ ಬಗ್ಗೆ, ಹಿರಿಯ ಸಹಾಯಕರ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಶ್ರೀ ಚಂದ್ರಶೇಖರ ಸಿ. ಪಾಟೀಲ್ ಇವರ ನೇಮಕಾತಿಗೆ ಸಂಬಂಧಿಸಿದಂತೆ, ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕ ಪತ್ರ ಇಲಾಖೆ ಬೆಂಗಳೂರು ಇವರು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ 2019-20 ಮತ್ತು 2020-21ನೇ ಸಾಲಿನ Audit report ನಲ್ಲಿ ಆಕ್ಷೇಪಣೆ ನೀಡಿ, ಪಡೆದಿರುವ ಆರ್ಥಿಕ ಸೌಲಭ್ಯಗಳನ್ನ ವಸೂಲಾತಿಗೆ ಸೂಚಿಸಿರುತ್ತಾರೆ. C & R ನಂತೆ ಇವರು 05 ವರ್ಷ ಪೂರೈಸಿದ್ದರೂ ಸಹ ಲೆಕ್ಕಪರಿಶೋಧನೆಯ ಆಕ್ಷೇಪಣೆಗಳ ಹಿನ್ನೆಲೆಯಲ್ಲಿ ಆಕ್ಷೇಪಣೆಗಳು ಇತ್ಯಾರ್ಥಗೊಂಡ ನಂತರ ಸೂಕ್ತ ಕ್ರಮಕೈಗೊಳ್ಳಲು ಸಮಿತಿಯು ಸೂಚಿಸಿತು.
ಡಾ. ಲೋಕೇಶ್ ವಿ. ಹೆಚ್. ಇವರು ಶಾಖಾಧಿಕಾರಿ ಹುದ್ದೆಗೆ ಪದೋನ್ನತಿ ಪಡೆಯಲು C & R ನಲ್ಲಿರುವಂತೆ ಹಿರಿಯ ಸಹಾಯಕರ ಹುದ್ದೆಯಲ್ಲಿ 05 ವರ್ಷಗಳು ಸೇವಾನುಭವ ಅವಶ್ಯಕವಾಗಿದ್ದು, ಇವರು 04 ವರ್ಷಗಳು ಮಾತ್ರ ಪೂರೈಸಿರುವುದರಿಂದ 05 ವರ್ಷಗಳು ಪೂರೈಸಿದ ನಂತರ ಕ್ರಮಕೈಗೊಳ್ಳುವಂತೆ ಸಮಿತಿಯು ಸೂಚಿಸಿತು.
4. ವಾಹನ ಚಾಲಕರ ಹುದ್ದೆಯಿಂದ ಮುಂಬಡ್ತಿ ನೀಡಲು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ C & R ನಲ್ಲಿ ವಾಹನ ಚಾಲಕರ ಹುದ್ದೆಯಿಂದ ಮುಂದಿನ ಹುದ್ದೆಗೆ ಪದೋನ್ನತಿಗೆ ಅವಕಾಶವಿಲ್ಲದ ಕಾರಣ, C & R ನ್ನು ತಿದ್ದುಪಡಿ ಮಾಡಿ ಸರ್ಕಾರದ ಅನುಮತಿ ಪಡೆದ ನಂತರ ಕ್ರಮಕೈಗೊಳ್ಳುವಂತೆ ಸಮಿತಿಯು ಸೂಚಿಸಿತು.
5. ಕಂಪ್ಯೂಟರ್ ಅಪರೇಟರ್ ಹುದ್ದೆಯಿಂದ ಮುಂಬಡ್ತಿ ನೀಡಲು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ C & R ನಲ್ಲಿ ವಾಹನ ಚಾಲಕರ ಹುದ್ದೆಯಿಂದ ಮುಂದಿನ ಹುದ್ದೆಗೆ ಪದೋನ್ನತಿಗೆ ಅವಕಾಶವಿಲ್ಲದ ಕಾರಣ, C & R ನ್ನು ತಿದ್ದುಪಡಿ ಮಾಡಿ ಸರ್ಕಾರದ ಅನುಮತಿ ಪಡೆದ ನಂತರ ಕ್ರಮಕೈಗೊಳ್ಳುವಂತೆ ಸಮಿತಿಯು ಸೂಚಿಸಿತು.

ಇಲಾಖಾ ಪದೋನ್ನತಿ ಸಮಿತಿಯ ಶಿಫಾರಸ್ಸನ್ನು ಸಭೆಯ ನಿರ್ಣಯಕ್ಕಾಗಿಮಂಡಿಸಿದೆ.

ನಿರ್ಣಯ

**1. ಮಂಗಳಾ ಎಂ. ಅಡುಗೆ ಸಹಾಯಕರು ಇವರಿಗೆ ಅಡುಗೆ ಸಹಾಯಕರ ಹುದ್ದೆಯಿಂದ 'ಅಡುಗೆಯವರ' ಹುದ್ದೆಗೆ ಪದೋನ್ನತಿ ನೀಡಲು ಅನುಮೋದಿಸಲಾಯಿತು.**

| | |
|---|---|
| | **2. ಗ್ರೂಪ್-ಡಿ ಯಿಂದ ಕಿರಿಯಸಹಾಯಕರ ಹುದ್ದೆಗೆ ಪದೋನ್ನತಿ ನೀಡಲು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ನಡೆಸುವ ಕಾವ್ಯ, ಸಾಹಿತ್ಯ ಇತ್ಯಾದಿ ಪರೀಕ್ಷೆಗಳು SSLC, PUC ಗೆ ಸಮಾನಾಂತರವೇ (Equivalent) ಎಂಬ ಬಗ್ಗೆ ಸರ್ಕಾರದ ಅನುಮತಿ ಪಡೆದು ಮುಂದಿನ ಕ್ರಮ ಕೈಗೊಳ್ಳಲು ನಿರ್ಣಯಿಸಲಾಯಿತು.**<br><br>**3. ಹಿರಿಯ ಸಹಾಯಕರ ಹುದ್ದೆಯಿಂದ ಶಾಖಾಧಿಕಾರಿ ಹುದ್ದೆಗೆ ಪದೋನ್ನತಿ ನೀಡುವ ಬಗ್ಗೆ ಶ್ರೀ ಚಂದ್ರಶೇಖರ ಸಿ. ಪಾಟೀಲ್ ಇವರ ನೇಮಕಾತಿಗೆ ಸಂಬಂಧಿಸಿದಂತೆ, ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕ ಪತ್ರ ಇಲಾಖೆ ಬೆಂಗಳೂರು ಇವರು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ 2019-20 ಮತ್ತು 2020-21ನೇ ಸಾಲಿನ Audit report ನಲ್ಲಿ ಆಕ್ಷೇಪಣೆ ನೀಡಿ, ಪಡೆದಿರುವ ಆರ್ಥಿಕ ಸೌಲಭ್ಯಗಳನ್ನು ವಸೂಲಾತಿಗೆ ಸೂಚಿಸಿರುತ್ತಾರೆ. ಲೆಕ್ಕಪರಿಶೋಧನೆಯ ಆಕ್ಷೇಪಣೆಗಳು ಇತ್ಯಾರ್ಥಗೊಂಡ ನಂತರ ಸೂಕ್ತ ಕ್ರಮಕೈಗೊಳ್ಳಲು ನಿರ್ಣಯಿಸಲಾಯಿತು.**<br><br>4. **ಉಳಿದ ಸಿಬ್ಬಂದಿಗಳಿಗೆ ಪದೋನ್ನತಿ ನೀಡುವ ಬಗ್ಗೆ, ಇಲಾಖಾ ಪದೋನ್ನತಿ ಸಮಿತಿಯ ಶಿಫಾರಸ್ಸಿನಂತೆ ಕ್ರಮ ವಹಿಸಲು ಸೂಚಿಸಲಾಯಿತು.** |
| **ವಿಷಯ 14**<br><br>**ಟಿಪ್ಪಣಿ** | **ಡೈರಿ ಮತ್ತು ಕ್ಯಾಲೆಂಡರ್ ನೀಡುವ ಬಗ್ಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ 2022-23ನೇ ಸಾಲಿಗೆ 31 ಕಾಲೇಜುಗಳು ಸಂಯೋಜನೆ ಪ್ರಸ್ತಾವನೆಯನ್ನು ಸಲ್ಲಿಸಿವೆ. ಸಂಯೋಜಿತ ಕಾಲೇಜಿನ ಬೋಧಕ ಸಿಬ್ಬಂದಿಗಳಿಗೆ ಮತ್ತು ವಿಶ್ವವಿದ್ಯಾಲಯ ಎಲ್ಲಾ ಸಿಬ್ಬಂದಿಗಳಿಗೆ ವಿಶ್ವವಿದ್ಯಾಲಯದ ವತಿಯಿಂದ **ಡೈರಿ ಮತ್ತು ಕ್ಯಾಲೆಂಡರ್ ನೀಡುವ ಬಗ್ಗೆ** ಸಭೆಯ ನಿರ್ಣಯಕ್ಕಾಗಿಮಂಡಿಸಿದೆ. |
| **ನಿರ್ಣಯ** | **ಆಂತರಿಕ ಸಂಪನ್ಮೂಲದಲ್ಲಿ ಡೈರಿ ಮತ್ತು ಕ್ಯಾಲೆಂಡರ್ ನೀಡಲು ಸಭೆಯು ಅನುಮೋದಿಸಿ, ಸಂಸ್ಕೃತದಲ್ಲಿಯೇ ಮುದ್ರಿಸಲು ಮತ್ತು ಭಾರತೀಯ ಕಾಲಮಾನ ಪದ್ಧತಿಯನ್ನು ಅನುಸರಿಸಲು ಸೂಚಿಸಿತು.** |
| **ವಿಷಯ 15**<br><br>**ಟಿಪ್ಪಣಿ** | **ಸಂಸ್ಕೃತ ಪ್ರಥಮಾ ಹಾಗೂ ಕಾವ್ಯ ಪಠ್ಯಪುಸ್ತಕಗಳನ್ನು ಮುದ್ರಿಸುವ ಬಗ್ಗೆ.**<br>ವಿಶ್ವವಿದ್ಯಾಲಯದ ಅಡಿಯಲ್ಲಿ ಸಂಸ್ಕೃತ ಶಿಕ್ಷಣ ನಿರ್ದೇಶನಾಲಯವು ಕಾರ್ಯ ನಿರ್ವಹಿಸುತ್ತಿದ್ದು, ಇದರಡಿಯಲ್ಲಿ ರಾಜ್ಯಾದ್ಯಂತ ಅನೇಕ ಪಾಠಶಾಲೆಗಳು ನಡೆಯುತ್ತಿವೆ. ಇಲ್ಲಿ ಸಂಸ್ಕೃತದ ಪ್ರಾಥಮಿಕ ಶಿಕ್ಷಣ ನೀಡುತ್ತಿದ್ದು, ಪ್ರಥಮಾ, ಕಾವ್ಯ ಮತ್ತು ಸಾಹಿತ್ಯ ತರಗತಿಗಳನ್ನು ಬೋಧಿಸಲಾಗುತ್ತಿದ್ದು, ಈ ತರಗತಿಗಳಿಗೆ ಪಠ್ಯಪುಸ್ತಕವನ್ನು ನಿರ್ದಿಷ್ಟಪಡಿಸಲಾಗಿದೆ. ಆದರೆ ಪ್ರಥಮಾ ಮೊದಲನೆಯ ವರ್ಷದ ವಿಭಾ ಪುಸ್ತಕ ಮತ್ತು ಪ್ರಥಮಾ ಮೂರನೇ ವರ್ಷದ ಶುಭಾ ಪುಸ್ತಕ ಹಾಗೂ ಕಾವ್ಯ ಮೊದಲನೇ ವರ್ಷದ ಕಾವ್ಯ ನವನೀತಮ್ ಹಾಗೂ ವ್ಯಾಕರಣ ನವನೀತಮ್ ಮತ್ತು ಕಾವ್ಯ ಎರಡನೇ ವರ್ಷದ ಕಾವ್ಯಾಮೃತಮ್ ಮತ್ತು ವ್ಯಾಕರಣಾಮೃತಮ್ ಪುಸ್ತಕಗಳು ಖಾಲಿಯಾಗಿದ್ದು ವಿದ್ಯಾರ್ಥಿಗಳು ಮತ್ತು ಶಿಕ್ಷಕರಿಗೆ ತೊಂದರೆಯಾಗುತ್ತಿದೆ. ಆದ್ದರಿಂದ ಈ ಪುಸ್ತಕಗಳ ಪುನರ್ಮುದ್ರಣ ಮಾಡಲು ಸಭೆಯ ಅನುಮೋದನೆಗೆ ಸಲ್ಲಿಸಿದೆ. |
| **ನಿರ್ಣಯ** | **ಮಾನ್ಯ ಕುಲಪತಿಗಳು SC/ST ಅನುದಾನದಲ್ಲಿ ಪುಸ್ತಕಗಳನ್ನು ಮುದ್ರಿಸುವ ಬಗ್ಗೆ ಸಭೆಗೆ ತಿಳಿಸಿದರು. SC/ST ವಿದ್ಯಾರ್ಥಿಗಳಿಗೆ ಉಚಿತವಾಗಿ ವಿತರಿಸಲು ಸಭೆಯು ಅನುಮೋದಿಸಿತು.** |
| **ವಿಷಯ 16**<br><br>**ಟಿಪ್ಪಣಿ** | **ವಾರ್ತಾಪತ್ರ ಮತ್ತು ಜರ್ನಲ್ ಮುದ್ರಿಸುವ ಬಗ್ಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಪ್ರತಿ 3 ತಿಂಗಳಿಗೆ ರಾಜ್ಯಾದ್ಯಂತ ಸಂಸ್ಕೃತ ಪಾಠಶಾಲೆ, ಕಾಲೇಜು ಮತ್ತು ಇನ್ನಿತರ ಸಂಸ್ಥೆಗಳಲ್ಲಿ ನಡೆಯುವ ಸಂಸ್ಕೃತ ಸಂಬಂಧಿ ಕಾರ್ಯಗಳು ಮತ್ತು ಸಂಸ್ಕೃತದ ಅಭಿವೃದ್ಧಿಗೆ ಸಂಬಂಧಿಸಿದ ವಿಷಯಗಳನ್ನು ಎಲ್ಲೆಡೆಗೆ ಪಸರಿಸುವ ಹಿನ್ನಲೆಯಲ್ಲಿ ವಾರ್ತಾಪತ್ರವನ್ನು ಹಲವು ವರ್ಷಗಳಿಂದ ಮುದ್ರಿಸುತ್ತಾ ಬಂದಿದೆ. ಅಲ್ಲದೇ, ಸಂಸ್ಕೃತ ಜ್ಞಾನಧಾರೆಯ ಪ್ರಸಾರಕ್ಕಾಗಿ ಪ್ರತಿ 6 ತಿಂಗಳಿಗೊಮ್ಮೆ ನಾಡಿನ ವಿದ್ವಾಂಸರ ಪಾಂಡಿತ್ಯಪೂರ್ಣ ಲೇಕನಗಳ ಷಾಣ್ಮಾಸಿಕ ಪತ್ರಿಕೆಯನ್ನು (ಜರ್ನಲ್) ಪ್ರಕಟಿಸುತ್ತಾ ಬಂದಿದೆ. ಇವೆರಡೂ ISSN ಮಾನಿತವಾಗಿದ್ದು ವಿಶ್ವವಿದ್ಯಾಲಯದ ಪ್ರತಿಷ್ಠೆಯ ಸಂಕೇತವಾಗಿವೆ. ಈ ಹಿನ್ನಲೆಯಲ್ಲಿ ಇವುಗಳನ್ನುಈ ಹಿಂದಿನಂತೆ ಮುದ್ರಿಸಲು ಸಭೆಯ ನಿರ್ಣಯಕ್ಕಾಗಿಮಂಡಿಸಿದೆ. |

| | |
|---|---|
| ನಿರ್ಣಯ | **ಸಂಸ್ಕೃತದ ಪ್ರಸಾರ, ಪ್ರಚಾರದ ದೃಷ್ಟಿಯಿಂದ ವಾರ್ತಾಪತ್ರ ಮತ್ತು ಜರ್ನಲ್ ಗಳನ್ನು ಸಂಸ್ಕೃತದಲ್ಲಿ ಮುದ್ರಿಸಲು ಸೂಚಿಸಿ ಸಭೆಯು ಅನುಮೋದಿಸಿತು.** |
| ವಿಷಯ 17 | **ಹ್ಯಾಂಡ್ ಬುಕ್ ಹಾಗೂ 2020-21, 2021-22, 2022-23ನೇ ಸಾಲಿನ ಮೂರುವರ್ಷದ ವಾರ್ಷಿಕ ವರದಿಗಳನ್ನು ಮುದ್ರಿಸುವ ಬಗ್ಗೆ.** |
| ಟಿಪ್ಪಣಿ | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಡಿಯಲ್ಲಿ 31 ಸಂಯೋಜಿತ ಕಾಳೇಜುಗಳು, 500ಕ್ಕೂ ಹೆಚ್ಚು ಪಾಠಶಾಲೆಗಳು, ಜ್ಯೋತಿಷ್ಯ ಅಧ್ಯಯನ ಕೇಂದ್ರ ಮತ್ತು ಸಂಶೋಧನ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿವೆ. ವಿಶ್ವವಿದ್ಯಾಲಯದಲ್ಲೂ ಸಹ ಹಲವು ವಿಭಾಗಗಳಿವೆ ಇವುಗಳ ಸಂಕ್ಷಿಪ್ತ ಪರಿಚಯಕ್ಕಾಗಿ ಹ್ಯಾಂಡ್ ಬುಕ್(ಕೈಪಿಡಿ) ಅವಶ್ಯಕವಾಗಿದ್ದೆ ಹಾಗೂ ಸರ್ಕಾರವು ಸಹ ಪ್ರತಿ ವರ್ಷವೂ ವಾರ್ಷಿಕ ವರದಿಯನ ಪ್ರತಿಗಳನ್ನು ಪೂರೈಸುವಂತೆ ಸೂಚಿಸುತ್ತದೆ. ಕೊರೋನಾ ಕಾರಣದಿಂದ ಕಳೆದೆರಡು ವರ್ಷ ಇದರ ಮುದ್ರಣವಾಗಿರಲಿಲ್ಲ. ಪ್ರಸ್ತುತ, ಎಲ್ಲಾ ಸಿಬ್ಬಂದಿ/ವಿಭಾಗಗಳಿಂದ ಮಾಹಿತಿ ಪಡೆದು ಮೂರು ವರ್ಷಗಳ ವಾರ್ಷಿಕ ವರದಿಯನ್ನು ನಿಗದಿತ ಮಾದರಿಯಲ್ಲಿ ಸಿದ್ಧಗೊಳಿಸಿದ್ದು, 2020-21, 2021-22, 2022-23 ಈ ಮೂರು ವರ್ಷದ ವಾರ್ಷಿಕ ವರದಿ ಪುಸ್ತಕಗಳನ್ನು ಮುದ್ರಿಸಲು ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | **ಹ್ಯಾಂಡ್ ಬುಕ್ ಹಾಗೂ ವಾರ್ಷಿಕ ವರದಿಗಳನ್ನು ಮುದ್ರಿಸಿ ಸರ್ಕಾರಕ್ಕೆ ಸಲ್ಲಿಸಲು ಅನುಮೋದಿಸಿತು.** |
| ವಿಷಯ 18 | **ಶ್ರೀಗೋವಿಂದಾಲೋಕಃ ಪುಸ್ತಕ ಮುದ್ರಿಸುವ ಬಗೆಗೆ.** |
| ಟಿಪ್ಪಣಿ | ಕೀರ್ತಿಶೇಷ ಬನ್ನಂಜೆ ಗೋವಿಂದಾಚಾರ್ಯರು ನಾಡು ಕಂಡ ಶ್ರೇಷ್ಠ ವಾಗ್ಮಿಗಳು, ಬಹುಶ್ರುತ ವಿದ್ವಾಂಸರು ಮತ್ತು ಸಂಸ್ಕೃತ ಸಾಹಿತ್ಯ ಲೋಕಕ್ಕೆ ಅಪಾರ ಕೊಡುಗೆ ನೀಡಿದ್ದಾರೆ. ಇವರ ಬಗ್ಗೆ ಪುಸ್ತಕ ಮುದ್ರಣವಾದಲ್ಲಿ ಇವರ ಸಾಧನೆಗಳ ಸ್ಥಾಯಿ ಪರಿಚಯವಾಗುತ್ತದೆ. ಈ ಹಿನ್ನೆಲೆಯಲ್ಲಿ ಪ್ರೊ. ವೀರನಾರಾಯಣ ಪಾಂಡುರಂಗಿಯವರು **ಶ್ರೀಗೋವಿಂದಾಲೋಕಃ** ಪುಸ್ತಕವನ್ನು ಸಂಪಾದಿಸಿರುತ್ತಾರೆ. ಬನ್ನಂಜೆ ಗೋವಿಂದಾಚಾರ್ಯರು ಸಂಸ್ಕೃತ ಕ್ಷೇತ್ರದಲ್ಲಿ ಅಪಾರ ಸಾಹಿತ್ಯ ಸೇವೆಯನ್ನು ಸಲ್ಲಿಸಿರುತ್ತಾರೆ. ಅವರಿಗೆ ಸಂಬಂಧಿಸಿದ ಈ ಗ್ರಂಥವನ್ನು ಮುದ್ರಿಸಿದರೆ ಸಂಸ್ಕೃತ ಪ್ರೇಮಿಗಳಿಗೆ ಅಪಾರ ಅನುಕೂಲವಾಗುವುದು. ಹಾಗಾಗಿ ಶ್ರೀಗೋವಿಂದಾಲೋಕಃ ಪುಸ್ತಕ ಮುದ್ರಿಸುವ ಕುರಿತು ಪ್ರಶಾಸನ ಸಮಿತಿಯ ನಿರ್ಣಯಕ್ಕಾಗಿಮಂಡಿಸಿದೆ. |
| ನಿರ್ಣಯ | **ಆಂತರಿಕ ಸಂಪನ್ಮೂಲದಿಂದ ಪುಸ್ತಕ ಮುದ್ರಣದ ವೆಚ್ಚವನ್ನು ಭರಿಸುವುದು ಮತ್ತು ಕೀರ್ತಿಶೇಷ ಬನ್ನಂಜೆ ಶ್ರೀ ಗೋವಿಂದಾಚಾರ್ಯರಿಗೆ ಅಪಾರ ಅಭಿಮಾನಿವರ್ಗ ಇರುವುದರಿಂದ ಪುಸ್ತಕ ಮಾರಾಟದಿಂದ ವೆಚ್ಚವನ್ನು ಮರುಭರಿಸಬಹುದು ಎಂದು ಕುಲಪತಿಗಳು ಸಭೆಗೆ ತಿಳಿಸಿದರು. ಸಭೆಯು ಶ್ರೀಗೋವಿಂದಾಲೋಕಃ ಪುಸ್ತಕ ಮುದ್ರಣವನ್ನು ಅನುಮೋದಿಸಿತು.** |
| ವಿಷಯ 19 | **2022-23ನೇ ಸಾಲಿನ ಜುಲೈ- 2022 ರಿಂದ ಮಾರ್ಚ್- 2023ರ ವರೆಗಿನ 09 ತಿಂಗಳ ಜಮಾ-ಖರ್ಚು ತಃಖ್ತೆಯನ್ನು ಅನುಮೋದಿಸುವ ಬಗೆಗೆ.** |
| ಟಿಪ್ಪಣಿ | 2022-23ನೇ ಸಾಲಿನ ಜುಲೈ- 2022 ರಿಂದ ಮಾರ್ಚ್ - 2023ರ ವರೆಗಿನ 09 ತಿಂಗಳ ಜಮಾ-ಖರ್ಚು ತಃಖ್ತೆಯನ್ನು ದಿ: 09.06.2023 ರಂದು ನಡೆದ ಹಣಕಾಸು ಸಮಿತಿಯ 43ನೇ ಸಭೆಯು ಅನುಮೋದಿಸಿದ್ದು, ಪ್ರಶಾಸನ ಸಮಿತಿಯ ನಿರ್ಣಯಕ್ಕಾಗಿಮಂಡಿಸಿದೆ. |
| ನಿರ್ಣಯ | **2022-23ನೇ ಸಾಲಿನ ಜುಲೈ- 2022 ರಿಂದ ಮಾರ್ಚ್- 2023ರ ವರೆಗಿನ 09 ತಿಂಗಳ ಜಮಾ-ಖರ್ಚು ತಃಖ್ತೆಯನ್ನು ಅನುಮೋದಿಸಿತು.** |
| ವಿಷಯ 20 | **Statute Governing the Board of Studies BOS – ಪರಿನಿಯಮವನ್ನು ಅನುಮೋದಿಸುವ ಬಗ್ಗೆ.** |
| ಟಿಪ್ಪಣಿ | ಈ ಪರಿನಿಯಮವು ಅಧ್ಯಯನ ಮಂಡಳಿಯ ರಚನೆ ಮತ್ತು ಕಾರ್ಯವಿಧಾನಕ್ಕೆ ಸಂಬಂಧಿಸಿದೆ. ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣವನ್ನು ನೀಡಲು, ತನ್ಮೂಲಕ ಶೈಕ್ಷಣಿಕ ಔನ್ನತ್ಯದ ಸಾಧನೆಗೆ ಉತ್ತಮ ಪಠ್ಯಕ್ರಮ ಅತ್ಯಗತ್ಯ. ಇದನ್ನು ನಿರ್ಧರಿಸುವ ಮಹತ್ತರ ಜವಾಬ್ದಾರಿಯು ಅಧ್ಯಯನ ಮಂಡಳಿಯದ್ದಾಗಿದೆ. ಅಧ್ಯಯನ |

| | |
|---|---|
| | ಮಂಡಳಿಯು ಆಯಾ ವಿಷಯಗಳಲ್ಲಿನ ವಿವಿಧ ಹಂತದ ಅಧ್ಯಯನಗಳಿಗಾಗಿ ಕೋರ್ಸ್‌ಗಳ ವಿವರವಾದ ಪಠ್ಯಕ್ರಮ ಮತ್ತು ಪರೀಕ್ಷೆಗಳ ಯೋಜನೆಗಳನ್ನು ಭೋಧಕರಿಗೆ ಮತ್ತು ಅಧ್ಯಯನಾಂಗಕ್ಕೆ ಸಿದ್ಧಪಡಿಸುವ ಮತ್ತು ಪ್ರಶಿಕ್ಷಣ ಪರಿಷತ್ತಿಗೆ ಶಿಫಾರಸು ಮಾಡುವ ಶಾಸನಬದ್ಧ ಮಂಡಳಿಯಾಗಿದೆ. ಅಧ್ಯಯನ ಮಂಡಳಿಯು ಶಿಫಾರಸು ಮಾಡಿ, ಪ್ರಶಿಕ್ಷಣ ಪರಿಷತ್ತಿನಿಂದ ಅನುಮೋದಿತವಾದ ಅಧ್ಯಯನ ವಿಷಯಗಳ ಪಠ್ಯಕ್ರಮವನ್ನು ಸಂಕಾಯ/ವಿಭಾಗಗಳಲ್ಲಿ ಅಳವಡಿಸಿಕೊಳ್ಳಬೇಕಿದೆ.<br><br>ಈ ಹಿನ್ನೆಲೆಯಲ್ಲಿ ಈ ಪರಿನಿಯಮವನ್ನು ರಚಿಸಿ ದಿ: 19.07.2023 ರಂದು ನಡೆದ ಪ್ರಶಿಕ್ಷಣ ಪರಿಷತ್ತಿನ 35ನೇ ಸಭೆಯಲ್ಲಿ ಈ ಪರಿನಿಯಮಕ್ಕೆ ಅನುಮೋದನೆ ಪಡೆದಿದ್ದು, ಪ್ರಶಾಸನ ಸಮಿತಿಯ ನಿರ್ಣಯಕ್ಕಾಗಿ ಮಂಡಿಸಿದೆ. |
| ನಿರ್ಣಯ | **BOS – ಪರಿನಿಯಮವನ್ನು ಅನುಮೋದಿಸಿ ಸರ್ಕಾರದ ಅನುಮೋದನಗೆ ಸಲ್ಲಿಸಲು ಸೂಚಿಸಲಾಯಿತು.** |
| ವಿಷಯ 21 | **Statute Governing Rules of Business of The Syndicate, The Academic Council, The Finance Committee and The Faculties ಈ ಪರಿನಿಯಮವನ್ನು ಅನುಮೋದಿಸುವ ಬಗ್ಗೆ.** |
| **ಟಿಪ್ಪಣಿ** | ಈ ಪರಿನಿಯಮವು ಪ್ರಶಾಸನ ಸಮಿತಿ, ಪ್ರಶಿಕ್ಷಣ ಪರಿಷತ್ತು, ಹಣಕಾಸು ಸಮಿತಿ ಮತ್ತು ಅಧ್ಯಾಪಕರ ನಡತೆ, ಆಡಳಿತ ನಿಯಮಗಳ ಕುರಿತಾಗಿದೆ.<br><br>ಪ್ರಶಾಸನ ಸಮಿತಿಯು ವಿಶ್ವವಿದ್ಯಾಲಯದ ವಿವಿಧ ವಿಷಯಗಳ ಬಗ್ಗೆ ನಿರ್ಣಯ ತೆಗೆದುಕೊಳ್ಳುವ ಉಚ್ಚ ಸಮಿತಿಯಾಗಿದೆ. ಇದು ಯಾವುದೇ ವಿಷಯವನ್ನು ಪ್ರಶಿಕ್ಷಣ ಪರಿಷತ್ತು, ಸಂಕಾಯ, ಅಧ್ಯಯನ ಮಂಡಳಿ, ಪರೀಕ್ಷಾ ಮಂಡಳಿ, ಅಥವಾ ಯಾವುದೇ ಸಮಿತಿ ಅಥವಾ ವ್ಯಕ್ತಿಗೆ ವರದಿ ಅಥವಾ ಅಭಿಪ್ರಾಯಕ್ಕಾಗಿ ನಿರ್ದೇಶಿಸಬಹುದು. ವಿಶ್ವವಿದ್ಯಾಲಯದ ಆಡಳಿತಾತ್ಮಕ ವಿಷಯಗಳನ್ನು ನಿರ್ಧರಿಸಬಹುದು. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಅಧಿನಿಯಮ – 2009ರ 22ನೆಯ ಉಪಬಂಧದಲ್ಲಿ ಪ್ರಶಾಸನ ಸಮಿತಿಯ ಅಧಿಕಾರ/ಜವಾಬ್ದಾರಿಗಳನ್ನು ವಿವರಿಸಿದ್ದು ಅದರಂತೆ ಪರಿನಿಯಮ ರಚಿಸಿದೆ.<br><br>ಪ್ರಶಿಕ್ಷಣ ಪರಿಷತ್ತು ಪಠ್ಯಕ್ರಮ, ಪಠ್ಯಪುಸ್ತಕಗಳು, ಪರೀಕ್ಷಾ ನಿಯಮಗಳು, ವಿಧ್ಯಾರ್ಥಿಗಳ ಅಡ್ಮೀಶನ್ ಮತ್ತು ಇನ್ನಿತರೆ ಅನೇಕ ವಿಷಯಗಳ ಕುರಿತಾಗಿ ಚರ್ಚಿಸಿ ಪ್ರಶಾಸನ ಸಮಿತಿಗೆ ಶಿಫಾರಸ್ಸು ಮಾಡುತ್ತದೆ. ವಿಶ್ವವಿದ್ಯಾಲಯದ ಶೈಕ್ಷಣಿಕ ವಿಷಯಗಳ ನಿರ್ಣಯದಲ್ಲಿ ಇದು ಪ್ರಧಾನಪಾತ್ರ ವಹಿಸುತ್ತದೆ. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಅಧಿನಿಯಮ – 2009ರ 25ನೇ ಉಪಬಂಧದಲ್ಲಿ ಪ್ರಶಿಕ್ಷಣ ಪರಿಷತ್ತಿನ ಅಧಿಕಾರ/ಜವಾಬ್ದಾರಿಗಳನ್ನು ವಿವರಿಸಿದ್ದು ಅದರಂತೆ ಪರಿನಿಯಮ ರಚಿಸಿದೆ.<br><br>ಹಣಕಾಸು ಸಮಿತಿಯು ವಿಶ್ವವಿದ್ಯಾನಿಲಯದ ಲೆಕ್ಕಪತ್ರಗಳ ಸಾಮಾನ್ಯ ಪರಿಶೀಲನೆ, ವಾರ್ಷಿಕ ಆಡಿಟ್ ವರದಿಗಳ ಪರಿಶೀಲನೆ ಮತ್ತು ಅದರ ಮೇಲೆ ಶಿಫಾರಸುಗಳನ್ನು ಮಾಡುತ್ತದೆ. ಕಾಲಕಾಲಕ್ಕೆ ವಿಶ್ವವಿದ್ಯಾಲಯದ ಆರ್ಥಿಕ ಸ್ಥಿತಿಯನ್ನು ಪರಿಶೀಲಿಸುತ್ತದೆ. ವಿಶ್ವವಿದ್ಯಾಲಯದ ಆರ್ಥಿಕ ಸ್ಥಿತಿಯನ್ನು ಉತ್ತಮವಾಗಿಟ್ಟು, ಆರ್ಥಿಕ ಶಿಸ್ತನ್ನು ಕಾಯ್ದುಕೊಳ್ಳುತ್ತದೆ. ಇದಕ್ಕೆ ಸಂಬಂಧಿಸಿದ ಅಂಶಗಳನ್ನು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಅಧಿನಿಯಮ – 2009ರ 28/2-9 ನೇ ಉಪಬಂಧದಂತೆ ಪರಿನಿಯಮದಲ್ಲಿ ಅಡಕಗೊಳಿಸಲಾಗಿದೆ.<br><br>ಅಧ್ಯಾಪಕರ ಬೋಧನೆ, ತರಬೇತಿ, ಸಂಶೋಧನೆ ಮತ್ತು ಪರೀಕ್ಷೆಗಳ ಆಯೋಜನೆಗೆ ಸಂಬಂಧಿಸಿದಂತೆ ವಿವಿಧ ವಿಷಯಗಳ ಬಗ್ಗೆ ಕರ್ನಾಟಕ ಸಂಸ್ಕೃತ |

| | |
|---|---|
| | ವಿಶ್ವವಿದ್ಯಾಲಯ ಅಧಿನಿಯಮ – 2009ರ 63ನೇ ಉಪಬಂಧದಲ್ಲಿ ವಿವರಿಸಿದ್ದು ಇವುಗಳ ಶಾಸನಬದ್ಧ ನಿಯಂತ್ರಣಕ್ಕಾಗಿ ಪರಿನಿಯಮದಲ್ಲಿ ಹಲವು ಉಪಬಂಧಗಳನ್ನು ರಚಿಸಿದೆ.<br><br>ದಿ: 19.07.2023 ರಂದು ನಡೆದ ಪ್ರಶಿಕ್ಷಣ ಪರಿಷತ್ತಿನ 35ನೇ ಸಭೆಯಲ್ಲಿ ಈ ಪರಿನಿಯಮಕ್ಕೆ ಅನುಮೋದನೆ ಪಡೆದಿದ್ದು, ಪ್ರಶಾಸನ ಸಮಿತಿಯ ನಿರ್ಣಯಕ್ಕಾಗಿ ಮಂಡಿಸಿದೆ. |
| ನಿರ್ಣಯ | **Statute Governing Rules of Business of The Syndicate, The Academic Council, The Finance Committee and The Faculties ಈ ಪರಿನಿಯಮವನ್ನು ಅನುಮೋದಿಸಿ ಸರ್ಕಾರದ ಅನುಮೋದನೆಗೆ ಸಲ್ಲಿಸಲು ಸೂಚಿಸಿತು.** |
| **ವಿಷಯ 22**<br><br>**ಟಿಪ್ಪಣಿ** | **Statute Governing Convocation for Conferring Degrees ಈ ಪರಿನಿಯಮವನ್ನು ಅನುಮೋದಿಸುವ ಬಗ್ಗೆ.**<br><br>ವಿಶ್ವವಿದ್ಯಾಲಯವು ನೀಡುವ ಪದವಿಗಳು ವಿದ್ಯಾರ್ಥಿಗಳ ಜೀವನದಲ್ಲಿ ಅತ್ಯಮೂಲ್ಯವಾಗಿರುತ್ತವೆ. ಪದವಿ/ಗೌರವ ಪದವಿಗಳನ್ನು ನೀಡುವ ಉದ್ದೇಶಕ್ಕಾಗಿ ಘಟಿಕೋತ್ಸವವನ್ನು ವರ್ಷಕ್ಕೊಮ್ಮೆ ವಿಶ್ವವಿದ್ಯಾಲಯದ ಪ್ರಶಾಸನ ಸಮಿತಿಯ ಶಿಫಾರಸಿನ ಮೇರೆಗೆ ಕುಲಪತಿಗಳು ನಿರ್ದೇಶಿಸಬಹುದಾದ ಯಾವುದೇ ದಿನಾಂಕದಂದು ನಡೆಸಬಹುದಾಗಿದೆ. ಕುಲಸಚಿವರು ವಾರ್ಷಿಕ ಘಟಿಕೋತ್ಸವಕ್ಕೆ ಕನಿಷ್ಠ 30 ದಿನಗಳ ಮೊದಲು ಪ್ರಮುಖ ಸುದ್ದಿ ಪತ್ರಿಕೆಗಳಲ್ಲಿ ಮತ್ತು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕಛೇರಿಯಲ್ಲಿ ಘಟಿಕೋತ್ಸವದ ದಿನಾಂಕವನ್ನು ಸೂಚಿಸುವ ಅಧಿಸೂಚನೆಯನ್ನು ಪ್ರಕಟಿಸಬೇಕು. ಘಟಿಕೋತ್ಸವಕ್ಕೆ ಸಂಬಂಧಿಸಿದ ಇತರ ಪ್ರಕ್ರಿಯಗಳ ನಿಯಮಕ್ಕಾಗಿ ಈ ಪರಿನಿಯಮವನ್ನು ರಚಿಸಿ ದಿ: 19.07.2023 ರಂದು ನಡೆದ ಪ್ರಶಿಕ್ಷಣ ಪರಿಷತ್ತಿನ 35ನೇ ಸಭೆಯಲ್ಲಿ ಅನುಮೋದನೆ ಪಡೆದಿದ್ದು, ಪ್ರಶಾಸನ ಸಮಿತಿಯ ನಿರ್ಣಯಕ್ಕಾಗಿ ಮಂಡಿಸಿದೆ. |
| ನಿರ್ಣಯ | **Statute Governing Convocation for Conferring Degrees ಪರಿನಿಯಮವನ್ನು ಅನುಮೋದಿಸಿ ಸರ್ಕಾರದ ಅನುಮೋದನೆಗೆ ಸಲ್ಲಿಸಲು ಸೂಚಿಸಿತು.** |
| **ವಿಷಯ 23**<br><br>**ಟಿಪ್ಪಣಿ** | **Statute Governing Conferring Honorary Degree or Other Academic Distinctions (Honouris Causa) - ಈ ಪರಿನಿಯಮವನ್ನು ಅನುಮೋದಿಸುವ ಬಗ್ಗೆ.**<br><br>ವಿಶ್ವವಿದ್ಯಾನಿಲಯವು ನೀಡುವ ಗೌರವ ಪದವಿಗಳು (ಡಿ. ಲಿಟ್) ವಿಶ್ವವಿದ್ಯಾಲಯದ ಗೌರವವನ್ನು ಹೆಚ್ಚಿಸುತ್ತವೆ. ಆದರೆ ಈ ಪದವಿಗಳ ಮೌಲ್ಯವನ್ನು ಕಾಯ್ದುಕೊಳ್ಳುವುದು ವಿಶ್ವವಿದ್ಯಾಲಯದ ಜವಾಬ್ದಾರಿಯಾಗಿದೆ. ಸಂಸ್ಕೃತ ಗದ್ಯ, ಕಾವ್ಯ, ನಾಟಕ, ಶಿಲ್ಪಕಲೆ, ಚಿತ್ರಕಲೆಗಳು, ಲಲಿತಕಲೆಗಳು, ಔಷಧಗಳು, ತತ್ವಶಾಸ್ತ್ರ ಮತ್ತು ಇತರ ಸಂಬಂಧಿತ ಕ್ಷೇತ್ರಗಳಲ್ಲಿ ಪರಿಣತರಿಗೆ, ವಿಶಿಷ್ಟ ಸಾಧನೆಗೈದವರಿಗೆ ಗೌರವ ಪದವಿ ನೀಡುವ ಬಗ್ಗೆ ಈ ಪರಿನಿಯಮವನ್ನು ರಚಿಸಿ ದಿ: 19.07.2023 ರಂದು ನಡೆದ ಪ್ರಶಿಕ್ಷಣ ಪರಿಷತ್ತಿನ 35ನೇ ಸಭೆಯಲ್ಲಿ ಅನುಮೋದನೆ ಪಡೆದು, ಪ್ರಶಾಸನ ಸಮಿತಿಯ ನಿರ್ಣಯಕ್ಕಾಗಿ ಮಂಡಿಸಿದೆ. |
| ನಿರ್ಣಯ | **Statute Governing Conferring Honorary Degree or Other Academic Distinctions (Honouris Causa) - ಈ ಪರಿನಿಯಮವನ್ನು ಅನುಮೋದಿಸಿ ಸರ್ಕಾರದ ಅನುಮೋದನೆಗೆ ಸಲ್ಲಿಸಲು ಸೂಚಿಸಿತು.** |
| **ವಿಷಯ 24**<br><br>**ಟಿಪ್ಪಣಿ** | **Statute Relating to Recognition for Offering Various Programmes Leading to Award of Degrees, Post Graduate Degrees, Diplomas, Post Graduate Diplomas And Certificates By The Karnataka Samskrita University ಈ ಪರಿನಿಯಮವನ್ನು ಅನುಮೋದಿಸುವ ಬಗ್ಗೆ.** |

| | |
|---|---|
| | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ವಿವಿಧ ವಿಷಯಗಳಲ್ಲಿ ಸ್ನಾತಕ, ಸ್ನಾತಕೋತ್ತರ ಪದವಿ ಕೋರ್ಸ್, ಡಿಪ್ಲೋಮಾ, ಪಿ. ಜಿ. ಡಿಪ್ಲೋಮಾ, ಸರ್ಟಿಫಿಕೇಟ್ ಮೊದಲಾದ ಕೋರ್ಸಗಳನ್ನು ನಡೆಸಿ ಅರ್ಹ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರಗಳನ್ನು ನೀಡುತ್ತದೆ. ಇವುಗಳ ಕ್ರಮಬದಧತೆಗಾಗಿ & ಮಾನ್ಯತೆಗಾಗಿ ಈ ಪರಿನಿಯಮವನ್ನು ರಚಿಸಿ ದಿ: 19.07.2023 ರಂದು ನಡೆದ ಪ್ರಶಿಕ್ಷಣ ಪರಿಷತ್ತಿನ 35ನೇ ಸಭೆಯಲ್ಲಿ ಅನುಮೋದನೆ ಪಡೆದಿದ್ದು, ಪ್ರಶಾಸನ ಸಮಿತಿಯ ನಿರ್ಣಯಕ್ಕಾಗಿ ಮಂಡಿಸಿದೆ. |
| ನಿರ್ಣಯ | **Statute Relating to Recognition for Offering Various Programmes Leading to Award of Degrees, Post Graduate Degrees, Diplomas, Post Graduate Diplomas And Certificates By The Karnataka Samskrita University ಈ ಪರಿನಿಯಮವನ್ನು ಅನುಮೋದಿಸಿ ಸರ್ಕಾರದ ಅನುಮೋದನೆಗೆ ಸಲ್ಲಿಸಲು ಸೂಚಿಸಿತು.** |
| **ವಿಷಯ 25** | **Regulations Governing the Degree of Doctor of Philosophy (Ph.D) - Vidyavaridhi – ನಿಯಮಾವಳಿಯನ್ನು ಅನುಮೋದಿಸುವ ಬಗ್ಗೆ.** |
| **ಟಿಪ್ಪಣಿ** | ವಿದ್ಯಾವಾರಿಧಿ **(Ph.D)** ಪದವಿಯು ವಿದ್ಯಾರ್ಜನೆಯ ಉತ್ಕೃಷ್ಟ ಮತ್ತು ಬೋಧನಾ ಕ್ಷೇತ್ರದಲ್ಲಿ ಉದ್ಯೋಗಾವಕಾಶಕ್ಕೆ ಅತ್ಯವಶ್ಯಕವಾಗಿದೆ. ಆದ್ದರಿಂದ ವಿದ್ಯಾವಾರಿಧಿ **(Ph.D)** ಪದವಿಯ ಘನತೆಯನ್ನು ರಕ್ಷಿಸಲು ಈ ನಿಯಮಾವಳಿಗಳನ್ನು ರಚಿಸಲಾಗಿದೆ. ಇದು ನೋಂದಣಿ ಪೂರ್ವ-ಸಂವಾದ, ಅಧ್ಯಯನ ಮಂಡಳಿಯ ಅನುಮೋದನೆ, ನೋಂದಾಯಿತ ಅಭ್ಯರ್ಥಿಗಳ ಅರ್ಧ-ವಾರ್ಷಿಕ ಪ್ರಗತಿ ವರದಿ, ಮಾರ್ಗದರ್ಶಕರ ಹಂಚಿಕೆ, ಸಲ್ಲಿಕೆ ಪೂರ್ವದ ಸಂವಾದವನ್ನು ನಡೆಸಲು ಮತ್ತು ಪ್ರಬಂಧವನ್ನು ಸಲ್ಲಿಸಲು ಅನುಮತಿ ಮೊದಲಾದ ವಿಷಯಗಳನ್ನು ನಿರ್ಧರಿಸುತ್ತದೆ. ಯು. ಜಿ. ಸಿ. ನಿಯಮ 2022ರಂತೆ ಈ ನಿಯಮವನ್ನು ರಚಿಸಿ ದಿ: 19.07.2023 ರಂದು ನಡೆದ ಪ್ರಶಿಕ್ಷಣ ಪರಿಷತ್ತಿನ 35ನೇ ಸಭೆಯಲ್ಲಿ ಈ ಪರಿನಿಯಮಕ್ಕೆ ಅನುಮೋದನೆ ಪಡೆದು, ಪ್ರಶಾಸನ ಸಮಿತಿಯ ನಿರ್ಣಯಕ್ಕಾಗಿ ಮಂಡಿಸಿದೆ. |
| ನಿರ್ಣಯ | **Regulations Governing the Degree of Doctor of Philosophy (Ph.D) - Vidyavaridhi – ನಿಯಮಾವಳಿಯನ್ನು ಅನುಮೋದಿಸಿ ಸರ್ಕಾರದ ಅನುಮೋದನೆಗೆ ಸಲ್ಲಿಸಲು ಸೂಚಿಸಿತು.** |
| **ವಿಷಯ 26** | **ಯೋಗ ವಿಜ್ಞಾನ ಮತ್ತು ಸಮಾಲೋಚನೆ ವಿಷಯದಲ್ಲಿ ನೂತನವಾಗಿ ಬಿ. ಎಸ್ಸಿ ಕೋರ್ಸ್ ಪ್ರಾರಂಭಿಸುವ ಬಗೆಗೆ.** |
| **ಟಿಪ್ಪಣಿ** | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಅಧಿನಿಯಮ - 2009 ಉಪಬಂಧ 49(IV) ರನ್ವಯ Faculty of Ancient Indian Sciences ಅಡಿಯಲ್ಲಿ Department of Counseling and Yoga Therapy ವಿಭಾಗವನ್ನು ಆರಂಭಿಸಲಾಗಿದ್ದು, ಈ ವಿಭಾಗಕ್ಕೆ ಬೋಧಕರ ವ್ಯವಸ್ಥೆಯನ್ನು ಮಾಡಲಾಗಿದೆ. ಯೋಗವು ಶಾರೀರಿಕ ಮತ್ತು ಮಾನಸಿಕ ಆರೋಗ್ಯಕ್ಕೆ ಅತ್ಯಂತ ಸಹಕಾರಿಯಾಗಿದೆ. ಆದ್ದರಿಂದ ಈ ವಿಭಾಗದಲ್ಲಿ 2023-24ನೇ ಸಾಲಿನಿಂದ ಯೋಗ ವಿಜ್ಞಾನ ಮತ್ತು ಸಮಾಲೋಚನೆ ವಿಷಯದಲ್ಲಿ ಬಿ. ಎಸ್ಸಿ ಪದವಿ(B. Sc.) ಕೋರ್ಸ್ ಪ್ರಾರಂಭ ಮಾಡುವುದರಿಂದ ವಿದ್ಯಾರ್ಥಿಗಳಿಗೆ ಮತ್ತು ವಿಶ್ವವಿದ್ಯಾಲಯಕ್ಕೆ ಅನುಕೂಲವಾಗುತ್ತದೆ.<br>ಆದ್ದರಿಂದ (B. Sc.) ಯೋಗ ವಿಜ್ಞಾನ ಮತ್ತು ಸಮಾಲೋಚನೆ ಕೋರ್ಸನ ಪರಿನಿಯಮ, ಪಠ್ಯಕ್ರಮಗಳನ್ನು ರಚಿಸಿ ಈ ಕೋರ್ಸನ್ನು ಪ್ರಾರಂಭಿಸಲು ದಿ: 19.07.2023 ರಂದು ನಡೆದ ಪ್ರಶಿಕ್ಷಣ ಪರಿಷತ್ತಿನ 35ನೇ ಸಭೆಯಲ್ಲಿ ಅನುಮೋದನೆ ಪಡೆದಿದ್ದು, ಪ್ರಶಾಸನ ಸಮಿತಿಯ ನಿರ್ಣಯಕ್ಕಾಗಿ ಮಂಡಿಸಿದೆ. |
| ನಿರ್ಣಯ | **ಸ್ವಯಂ ಹಣಕಾಸು ಯೋಜನೆಯಲ್ಲಿ ಸರ್ಕಾರದ ಅನುಮತಿಯೊಂದಿಗೆ ನೂತನವಾಗಿ ಬಿ. ಎಸ್ಸಿ ಕೋರ್ಸ್ ಪ್ರಾರಂಭಿಸಲು ಸಭೆಯು ಅನುಮೋದಿಸಿತು.** |
| ವಿಷಯ 27 | **ಯೋಗ ಥೆರಪಿ ಮತ್ತು ಸಮಾಲೋಚನೆ ವಿಷಯದಲ್ಲಿ ಎಮ್. ಎಸ್ಸಿ.** (M. Sc.) **ಕೋರ್ಸ್ ಪ್ರಾರಂಭಿಸುವ ಬಗೆಗೆ.** |

| | |
|---|---|
| ಟಿಪ್ಪಣಿ | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ Faculty of Ancient Indian Sciences ಅಡಿಯಲ್ಲಿ Department of Counseling and Yoga Therapy ವಿಭಾಗವನ್ನು ಆರಂಭಿಸಲಾಗಿದ್ದು, ಈ ವಿಭಾಗಕ್ಕೆ ವಿಭಾಗಾಧ್ಯಕ್ಷರು ಮತ್ತು ಅತಿಥಿ ಉಪನ್ಯಾಸಕರ ವ್ಯವಸ್ಥೆಯನ್ನು ಮಾಡಲಾಗಿದೆ. ಯೋಗವು ಪ್ರಸ್ತುತ ಕಾಲಘಟ್ಟದಲ್ಲಿ ಅತ್ಯಂತ ಮಹತ್ವಪೂರಣವಾಗಿದ್ದು, ವಿಶ್ವವ್ಯಾಪಿಯಾಗಿದೆ. ಆದ್ದರಿಂದ ಈ ವಿಭಾಗದಲ್ಲಿ 2023-24ನೇ ಸಾಲಿನಿಂದ ಯೋಗ ಥೆರಪಿ ಮತ್ತು ಸಮಾಲೋಚನೆ ವಿಷಯದಲ್ಲಿ ಸ್ನಾತಕೋತ್ತರ (M. Sc.) ಕೋರ್ಸ್ ಪ್ರಾರಂಭ ಮಾಡುವುದರಿಂದ ವಿದ್ಯಾರ್ಥಿಗಳಿಗೆ ಮತ್ತು ವಿಶ್ವವಿದ್ಯಾಲಯಕ್ಕೆ ಅನುಕೂಲವಾಗುತ್ತದೆ.<br>ಆದ್ದರಿಂದ (M. Sc.) ಯೋಗ ಥೆರಪಿ ಮತ್ತು ಸಮಾಲೋಚನೆ ಕೋರ್ಸನ ಪರಿನಿಯಮ; ಪಠ್ಯಕ್ರಮಗಳನ್ನು ರಚಿಸಿ ಈ ಕೋರ್ಸನ್ನು ಪ್ರಾರಂಭಿಸಲು ದಿ: 19.07.2023 ರಂದು ನಡೆದ ಪ್ರಶಿಕ್ಷಣ ಪರಿಷತ್ತಿನ 35ನೇ ಸಭೆಯಲ್ಲಿ ಅನುಮೋದನೆ ಪಡೆದಿದ್ದು, ಪ್ರಶಾಸನ ಸಮಿತಿಯ ನಿರ್ಣಯಕ್ಕಾಗಿ ಮಂಡಿಸಿದೆ. |
| ನಿರ್ಣಯ | **ಸ್ವಯಂ ಹಣಕಾಸು ಯೋಜನೆಯಲ್ಲಿ ಸರ್ಕಾರದ ಅನುಮತಿಯೊಂದಿಗೆ ನೂತನವಾಗಿ ಎಮ್. ಎಸ್ಸಿ.** (M. Sc.) **ಯೋಗ ಥೆರಪಿ ಮತ್ತು ಸಮಾಲೋಚನೆ ಕೋರ್ಸ್ ಪ್ರಾರಂಭಿಸಲು ಸಭೆಯು ಅನುಮೋದಿಸಿತು.** |
| ವಿಷಯ 28 | **ವಿಶ್ವವಿದ್ಯಾಲಯದಲ್ಲಿ ಮುಂದಿನ ದಿನಗಳಲ್ಲಿ B. Ed., B.A., ಮತ್ತು B. Sc. ಕೋರ್ಸಗಳನ್ನು ಪ್ರಾರಂಭಿಸುವ ಬಗ್ಗೆ.** |
| ಟಿಪ್ಪಣಿ | ಬಿ. ಎಡ್. ಪದವಿಯು ವಿದ್ಯಾರ್ಥಿಗಳಿಗೆ ಉದ್ಯೋಗಾವಕಾಶವನ್ನು ಹೆಚ್ಚಿಸುತ್ತದೆ. ಸಂಸ್ಕೃತ ವಿದ್ಯಾರ್ಥಿಗಳಿಗೆ ಉದ್ಯೋಗವಾಕಾಶವನ್ನು ಕಲ್ಪಿಸಿದಲ್ಲಿ ಅಧ್ಯಯನಾರ್ಥಿಗಳ ಸಂಖ್ಯೆ ಹೆಚ್ಚುತ್ತದೆ. ಆದ್ದರಿಂದ Faculty of Education ಸಂಕಾಯವನ್ನು ಪ್ರಾರಂಬಿಸಿ, ಅದರಡಿಯಲ್ಲಿ ಮುಂದಿನ ದಿನಗಳಲ್ಲಿ NCTE ನಿಯಮ ಮತ್ತು ಅನುಮೋದನೆಯೊಂದಿಗೆ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ **ಬಿ. ಎಡ್.** ಪದವಿಯನ್ನು ಪ್ರಾರಂಭಿಸುವುದು ಉತ್ತಮ ಉಪಕ್ರಮವಾಗುತ್ತದೆ.<br><br>ವಿದ್ಯಾರ್ಥಿಗಳ ಉದ್ಯೋಗಾವಕಾಶದ ದೃಷ್ಟಿಯಿಂದ **B.A. (ಸಂಸ್ಕೃತ, ಯೋಗ, ಇತಿಹಾಸ), B. Sc. (Diet and nutrition)** ಕೋರ್ಸಗಳನ್ನು ಪ್ರಾರಂಭಸಲು ಮತ್ತು ವಿಶ್ವವಿದ್ಯಾಲಯದ ಸಂಸ್ಕೃತ ಸಂಜೆ ಕಾಲೇಜನ್ನು ಸ್ಥಾಪನೆಗೆ ಪರಿನಿಯಮವನ್ನು ರಚಿಸಿ ಕೋರ್ಸಗಳನ್ನು ನಡೆಸಲು ದಿ: 19.07.2023 ರಂದು ನಡೆದ ಪ್ರಶಿಕ್ಷಣ ಪರಿಷತ್ತಿನ 35ನೇ ಸಭೆಯಲ್ಲಿ ಅನುಮೋದನೆ ಪಡೆದಿದ್ದು, ಪ್ರಶಾಸನ ಸಮಿತಿಯ ನಿರ್ಣಯಕ್ಕಾಗಿ ಮಂಡಿಸಿದೆ. |
| ನಿರ್ಣಯ | **ಅಗತ್ಯ ಮೂಲಭೂತ ಸೌಕರ್ಯಗಳನ್ನು ಕಲ್ಪಸಿ, ಇನ್ನಿತರ ಅಗತ್ಯತೆಗಳನ್ನು ಪೂರೈಸಿ ಕೋರ್ಸಗಳನ್ನು ಪ್ರಾರಂಭಿಸಲು ಸಭೆಯು ಅನುಮೋದಿಸಿತು.** |
| ವಿಷಯ 29 | **ಹಸ್ತಪ್ರತಿಶಾಸ್ತ್ರ ವಿಭಾಗದಿಂದ ಸರ್ಟಿಫಿಕೇಟ್ ಕೋರ್ಸ್ ಗಳನ್ನು ಆರಂಭಿಸುವ ಬಗ್ಗೆ.** |
| ಟಿಪ್ಪಣಿ | ದೇಶದ ವಿವಿಧ ಗ್ರಂಥಾಲಯಗಳಲ್ಲಿ ಅಪ್ರಕಾಶಿತ ಹಸ್ತಪ್ರತಿಗಳಿದ್ದು ಅವುಗಳ ಸಂಪಾದನೆ ಮತ್ತು ಪ್ರಕಾಶನದಿಂದ ಅತ್ಯಮೂಲ್ಯ ಜ್ಞಾನರಾಶಿಯನ್ನು ಪ್ರಪಂಚಕ್ಕೆ ಪರಿಚಯಿಸಬಹುದು. ಇದಕ್ಕೆ ಲಿಪಿಜ್ಞಾನ ಹೊಂದಿದ ಸಂಶೋಧಕರ ಅವಶ್ಯಕತೆಯಿದೆ. ಆದ್ದರಿಂದ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ಈ ಕೆಳಗಿನ ಲಿಪಿಗಳಲ್ಲಿ ಸರ್ಟಿಫಿಕೇಟ್ ಕೋರ್ಸ್ ಗಳನ್ನು ಆರಂಭಿಸಬಹುದಾಗಿದೆ.<br><br>1) ಬ್ರಾಹ್ಮೀ ಲಿಪಿ<br>2) ತಿಗಳಾರೀ ಲಿಪಿ<br>3) ನಂದಿನಾಗರೀ ಲಿಪಿ<br>4) ಗ್ರಂಥ ಲಿಪಿ<br>5) ಶಾರದಾ ಲಿಪಿ |

| | |
|---|---|
| | **ಕೋರ್ಸಿನ ಸ್ವರೂಪ:**<br>ಒಟ್ಟು ಅವಧಿ : 6 ತಿಂಗಳು<br>ಕ್ರೆಡಿಟ್ : 2 ಒಟ್ಟು ತರಗತಿ : 32 – ವಾರಕ್ಕೆ 2 ತರಗತಿಗಳು, ಒಟ್ಟು 16 ವಾರಗಳ ಬೋಧನೆ. ಕೊನೆಯ 4 ವಾರಗಳಲ್ಲಿ ಕ್ಷೇತ್ರಕಾರ್ಯ, ಕೊನೆಯ 4 ವಾರಗಳಲ್ಲಿ ಪರೀಕ್ಷೆಯ ಸಿದ್ಧತೆ ಹಾಗೂ ಪರೀಕ್ಷೆ.<br>ಪತ್ರಗಳು : 1) ಪಿ. ಪಿ. ಪರಿಚಯ 2) ಪ್ರಾಯೋಗಿಕತೆ<br>ಬೋಧನೆ ಮಾಡಲು ಅರ್ಹ ಬೋಧಕರನ್ನು ಆರಿಸಿ ಅವರ ಮೂಲಕ ತರಗತಿಗಳನ್ನು ನಡೆಸುವುದು.<br>ಸಂಗ್ರಹವಾದ ಕೋರ್ಸ್ ಶುಲ್ಕದಿಂದ ಬೋಧಕರಿಗೆ ವಿಶ್ವವಿದ್ಯಾಲಯ ನಿಗದಿಪಡಿಸಿದ ಮೊತ್ತದ ಗೌರವ ಸಂಭಾವನೆಯನ್ನು ನೀಡುವುದು.<br><br>**"ಶ್ಲೋಕಸಿದ್ಧಿ" ಸರ್ಟಿಫಿಕೇಟ್ ಕೋರ್ಸ್ ಗಳನ್ನು ಆರಂಭಿಸುವ ಬಗ್ಗೆ.**<br><br>ಈಗಾಗಲೇ ವಿಶ್ವವಿದ್ಯಾಲಯದಲ್ಲಿ ವಿವಿಧ ವಿಭಾಗಗಳಲ್ಲಿ ವಿವಿಧ ಡಿಪ್ಲೋಮಾ, ಸರ್ಟಿಫಿಕೇಟ್ ಕೋರ್ಸ್ ಗಳನ್ನು ನಡೆಸಲಾಗುತ್ತಿದೆ. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಅಧಿನಿಯಮ - 2009 ಉಪಬಂಧ 49(IV) ರನ್ವಯ Faculty of Ancient Indian Sciences ಸಂಕಾಯ ಕಾರ್ಯ ನಿರ್ಹಹಿಸುತ್ತಿದ್ದು ಇದರಡಿಯಲ್ಲಿ **"ಶ್ಲೋಕಸಿದ್ಧಿ"** ವಿಷಯದಲ್ಲಿ ಸರ್ಟಿಫಿಕೇಟ್ ಕೋರ್ಸ್ ಅನ್ನು ಪ್ರಾರಂಭೀಸುವುದು.<br><br>ಈ ಮೇಲಿನ ವಿಷಯಗಳಲ್ಲಿ ಸರ್ಟಿಫಿಕೇಟ್ ಕೋರ್ಸ್ ಗಳನ್ನು ಪ್ರಾರಂಭಿಸಲು ದಿ: 19.07.2023 ರಂದು ನಡೆದ ಪ್ರಶಿಕ್ಷಣ ಪರಿಷತ್ತಿನ 35ನೇ ಸಭೆಯು ಅನುಮೋದಿಸಿದ್ದು, ಪ್ರಶಾಸನ ಸಮಿತಿಯ ನಿರ್ಣಯಕ್ಕಾಗಿ ಮಂಡಿಸಿದೆ. |
| ನಿರ್ಣಯ | **ಹೆಚ್ಚುವರಿ ಆರ್ಥಿಕ ಹೊರೆಯಾಗದಂತೆ ಹಸ್ತಪ್ರತಿಶಾಸ್ತ್ರವಿಭಾಗದಿಂದ ಸರ್ಟಿಫಿಕೇಟ್ ಕೋರ್ಸ್ ಗಳನ್ನು & "ಶ್ಲೋಕಸಿದ್ಧಿ" ಸರ್ಟಿಫಿಕೇಟ್ ಕೋರ್ಸನ್ನು ಪ್ರಾರಂಭಿಸಲು ಸಭೆಯು ಅನುಮೋದಿಸಿತು.** |
| **ವಿಷಯ 30**<br><br>**ಟಿಪ್ಪಣಿ** | **ಪಿ. ಹೆಚ್.ಡಿ ಕೋರ್ಸ ವರ್ಕ್ ತರಗತಿಯಲ್ಲಿ ಹಾಜರಾತಿಯ ಅಭಾವವಿರುವ 2021-22 ನೇ ಸಾಲಿನ ವಿದ್ಯಾರ್ಥಿಗಳಿಗೆ ಪರಿಹಾರ ತರಗತಿಗಳನ್ನು ಆಯೋಜಿಸುವ ಬಗೆಗೆ.**<br><br>**2021-22** ನೇ ಸಾಲಿನಲ್ಲಿ **186** ವಿದ್ಯಾರ್ಥಿಗಳು ವಿವಿಧ ವಿಭಾಗಳಳಲ್ಲಿ ಪಿ. ಹೆಚ್. ಡಿ. ಪದವಿಗೆ ನೋಂದಾಯಿತರಾಗಿದ್ದು, ಇವರಿಗೆ ಯು.ಜಿ.ಸಿ. ನಿಯಮಾನುಸಾರ ಕೋರ್ಸ ವರ್ಕ ತರಗತಿಗಳನ್ನು ನಡೆಸಲಾಗಿದೆ. ಇವರಲ್ಲಿ **70** ವಿದ್ಯಾರ್ಥಿಗಳಿಗೆ ನಿಗದಿತ ಹಾಜರಾತಿಯ ಅಭಾವವಿರುತ್ತದೆ. ಈ ದ್ಯಾರ್ಥಿಗಳು ತಮಗೆ ಪರಿಹಾರ ತರಗತಿಗಳನ್ನು ನಡೆಸಿ ಉನ್ನತ ವ್ಯಾಸಂಗಕ್ಕೆ ಅವಕಾಶ ಮಾಡಿಕೊಡಬೇಕೆಂದು ಮನವಿ ಸಲ್ಲಿಸಿದ್ದಾರೆ. ವಿಶ್ವವಿದ್ಯಾಲಯದ ಮತ್ತು ವಿದ್ಯಾರ್ಥಗಳ ಹಿತದೃಷ್ಟಿಯಿಂದ ಈ 70 ವಿದ್ಯಾರ್ಥಿಗಳಿಗೆ ಪರಿಹಾರ ತರಗತಿಗಳನ್ನು ಆಯೋಜಿಸಿ ಸಂಶೋಧನಾ ಕಾರ್ಯವನ್ನು ಮುಂದುವರೆಸಲು ಅವಕಾಶ ನೀಡುವ ಬಗ್ಗೆ, ದಿ: 19.07.2023 ರಂದು ನಡೆದ ಪ್ರಶಿಕ್ಷಣ ಪರಿಷತ್ತಿನ 35ನೇ ಸಭೆಯಲ್ಲಿ ಅನುಮೋದನೆ ಪಡೆದು, ಪ್ರಶಾಸನ ಸಮಿತಿಯ ನಿರ್ಣಯಕ್ಕಾಗಿ ಮಂಡಿಸಿದೆ. |
| ನಿರ್ಣಯ | **ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಪಿ. ಹೆಚ್.ಡಿ ಕೋರ್ಸ ವರ್ಕ್ ತರಗತಿಯಲ್ಲಿ ಹಾಜರಾತಿಯ ಅಭಾವವಿರುವ 2021-22 ನೇ ಸಾಲಿನ ವಿದ್ಯಾರ್ಥಿಗಳಿಗೆ ಪರಿಹಾರ ತರಗತಿಗಳನ್ನು ಆಯೋಜಿಸಲು ಸಭೆಯು ಅನುಮೋದಿಸಿತು.** |
| **ವಿಷಯ 31**<br><br>**ಟಿಪ್ಪಣಿ** | **ಪಿ.ಹೆಚ್ ಡಿ. ಸಂಶೋಧನಾ ವಿದ್ಯಾರ್ಥಿಗಳಿಗೆ ಮಾರ್ಗದರ್ಶಕನ್ನು ಗುರುತಿಸಿ ಹಂಚಿಕೆ ಮಾಡುವ ಬಗೆಗೆ.** |

| | |
|---|---|
| | ಯು. ಜಿ.ಸಿ. ಪಿ.ಹೆಚ್.ಡಿ ನಿಯಮ 2022ರ ಪ್ರಕಾರ ವಿಶ್ವವಿದ್ಯಾಲಯ ಮತ್ತು ಸಂಯೋಜಿತ ಕಾಲೇಜುಗಳ ಅರ್ಹ ಬೋಧಕ ಸಿಬ್ಬಂದಿಗಳನ್ನು ಮಾರ್ಗದರ್ಶಕರಾಗಿ ಗುರುತಿಸಿ, ಸಂಬಂಧಿಸಿದ ವಿಷಯಗಳ ಸಂಶೋಧನಾ ವಿದ್ಯಾರ್ಥಿಗಳಿಗೆ ಮಾರ್ಗದರ್ಶಕರ ಹಂಚಿಕೆ ಮಾಡಲು ದಿ: 19.07.2023 ರಂದು ನಡೆದ ಪ್ರಶಿಕ್ಷಣ ಪರಿಷತ್ತಿನ 35ನೇ ಸಭೆಯಲ್ಲಿ ಅನುಮೋದನೆ ಪಡೆದು, ಪ್ರಶಾಸನ ಸಮಿತಿಯ ನಿರ್ಣಯಕ್ಕಾಗಿ ಮಂಡಿಸಿದೆ. |
| ನಿರ್ಣಯ | **ಯು. ಜಿ. ಸಿ. ನಿಯಮಗಳಂತೆ ಅರ್ಹ ಬೋಧಕ ಸಿಬ್ಬಂದಿಗಳನ್ನು ಮಾರ್ಗದರ್ಶಕರಾಗಿ ಗುರುತಿಸಿ, ಪಿ. ಹೆಚ್ ಡಿ. ಸಂಶೋಧನಾ ವಿದ್ಯಾರ್ಥಿಗಳಿಗೆ ಹಂಚಿಕೆ ಮಾಡಲು ಸಭೆಯು ಅನುಮೋದಿಸಿತು.** |
| ವಿಷಯ 32<br><br>**ಟಿಪ್ಪಣಿ** | **ಸಂಶೋಧನಾ ಕೇಂದ್ರಗಳಿಗೆ ಮಾನ್ಯತೆಯನ್ನು ನೀಡುವ ಬಗೆಗೆ.**<br><br>2023ನೇ ಸಾಲಿನಲ್ಲಿ ಈ ಕೆಳಗಿನ ಸಂಸ್ಥೆಗಳು ತಾವು ನಡೆಸುವ ಸಂಶೋಧನಾ ಕೇಂದ್ರದ ಮಾನ್ಯತೆಗಾಗಿ ಅರ್ಜಿ ಸಲ್ಲಿಸಿದ್ದವು.<br>1. SRI SRI VEDA AGAMA RESEARCH INSTITUTE, "VED VIGNAN MAHA VIDYA PEETH", THE ART OF LIVING INTERNATIONAL CENTRE, 21ST K.M. kanakapura Road, Udayapura, Bangalore South – 560082.<br>2. ಆನಂದ ಜ್ಞಾನ ವಿಜ್ಞಾನ ಪರಿಷತ್ ಟ್ರಸ್ಟ್, ಯಡತೊರೆ ಶ್ರೀ ಯೋಗಾನಂದೇಶ್ವರ ಸರಸ್ವತಿ ಮಠ, ಕೆ.ಆರ್. ನಗರ<br>3. ಆತ್ಮಜ್ಯೋತಿ ವಿಶ್ವಗುರುಕುಲ ರಿಸರ್ಚ್ ಫೌಂಡೇಶನ್, 100 ಅಡಿ ರಸ್ತೆ, ವಜ್ರಹಳ್ಳಿ, ಕನಕಪುರ ರಸ್ತೆ, ಬೆಂಗಳೂರು - 560062<br><br>ವಿಶ್ವವಿದ್ಯಾಲಯದಿಂದ ತಪಾಸಣಾ ಸಮಿತಿಯು ಈ ಸಂಸ್ಥೆಗಳಿಗೆ ಭೇಟಿ ನೀಡಿ, ವಿಶ್ವವಿದ್ಯಾಲಯದ ಪರಿನಿಯಮಾನುಸಾರ ನಿಗದಿತ ಮೂಲಭೂತ ಸೌಲಭ್ಯ/ಇನ್ನಿತರ ಅರ್ಹತೆ ಹೊಂದಿರುವುದರಿಂದ ಈ ಸಂಸ್ಥೆಗಳಿಗೆ ಮಾನ್ಯತೆ ನೀಡಲು ಶಿಫಾರಸು ಮಾಡಿದೆ. ಆದ್ದರಿಂದ ಈ ಮೇಲಿನ ಮೂರು ಸಂಸ್ಥೆಗಳಿಗೆ ಪ್ರಶಿಕ್ಷಣ ಪರಿಷತ್ತಿನ ಘಟನೋತ್ತರ ಅನೋಮೋದನೆಯನ್ನು ನಿರೀಕ್ಷಿಸಿ ಸಂಶೋಧನಾ ಕೇಂದ್ರದ ಮಾನ್ಯತೆಯನ್ನು ನೀಡಿದ್ದು, ದಿ: 19.07.2023 ರಂದು ನಡೆದ ಪ್ರಶಿಕ್ಷಣ ಪರಿಷತ್ತಿನ 35ನೇ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿದೆ.<br><br>**ಸರ್ಟಿಫಿಕೇಟ್ ಕೋರ್ಸ್ ಗಳನ್ನು ಆರಂಭಿಸುವ ಬಗ್ಗೆ.**<br>ಆನಂದ ಜ್ಞಾನ ವಿಜ್ಞಾನ ಪರಿಷತ್ ಟ್ರಸ್ಟ್, ಯಡತೊರೆ ಶ್ರೀ ಯೋಗಾನಂದೇಶ್ವರ ಸರಸ್ವತಿ ಮಠ, ಕೆ.ಆರ್. ನಗರ ಇವರು ಸಂಶೋಧನಾ ಕೇಂದ್ರದ ಮಾನ್ಯತೆಯ ಜೊತೆಗೆ **ಭಗವದ್ಗೀತೆ, ಪುರಾಣ, ಸ್ತೋತ್ರ** ಮೊದಲಾದ ವಿಷಯಗಳಲ್ಲಿ ಸರ್ಟಿಫಿಕೇಟ್ ಕೋರ್ಸನ್ನು ಪ್ರಾರಂಭಿಸಲು ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಸದರಿ ಸಂಶೋಧನಾ ಕೇಂದ್ರವು ಮೂಲಭೂತ ಸೌಲಭ್ಯವನ್ನು ಹೊಂದಿರುವುದರಿಂದ ಈ ಸಂಸ್ಥೆಗೆ ಸರ್ಟಿಫಿಕೇಟ್ ಕೋರ್ಸನ್ನು ಪ್ರಾರಂಭಿಸಲು ಅನುಮತಿ ನೀಡುವ ಬಗ್ಗೆ ದಿ: 19.07.2023 ರಂದು ನಡೆದ ಪ್ರಶಿಕ್ಷಣ ಪರಿಷತ್ತಿನ 35ನೇ ಸಭೆಯಲ್ಲಿ ಅನುಮೋದನೆ ಪಡೆಯಲಾಗಿದೆ.<br>ಈ ಬಗ್ಗೆ, ಪ್ರಶಾಸನ ಸಮಿತಿಯ ನಿರ್ಣಯಕ್ಕಾಗಿ ಮಂಡಿಸಿದೆ. |
| ನಿರ್ಣಯ | **SRI SRI VEDA AGAMA RESEARCH INSTITUTE, "VED VIGNAN MAHA VIDYA PEETH", ಆನಂದ ಜ್ಞಾನ ವಿಜ್ಞಾನ ಪರಿಷತ್ ಟ್ರಸ್ಟ್, ಯಡತೊರೆ ಶ್ರೀ ಯೋಗಾನಂದೇಶ್ವರ ಸರಸ್ವತಿ ಮಠ, ಆತ್ಮಜ್ಯೋತಿ ವಿಶ್ವಗುರುಕುಲ ರಿಸರ್ಚ ಫೌಂಡೇಶನ್ ಈ ಮೂರು ಸಂಶೋಧನಾ ಕೇಂದ್ರಗಳಿಗೆ ಮಾನ್ಯತೆಯನ್ನು ನೀಡಲು ಮತ್ತು ಪ್ರಸ್ತಾವನೆಯಂತೆ ಸರ್ಟಿಫಿಕೇಟ್ ಕೋರ್ಸ್ ಗಳನ್ನು ಆರಂಭಿಸಲು ಅನುಮೋದಿಸಲಾಯಿತು.** |
| ವಿಷಯ 33 | **ಸಮಾಲೋಚನೆ ಮತ್ತು ಯೋಗ ಚಿಕಿತ್ಸೆ ವಿಭಾಗಕ್ಕೆ ಸಂದರ್ಶಕ ಉಪನ್ಯಾಸಕರ ವ್ಯವಸ್ಥೆಯ ಬಗೆಗೆ.** |

| | |
|---|---|
| ಟಿಪ್ಪಣಿ | ವಿಶ್ವವಿದ್ಯಾಲಯದಲ್ಲಿ ಭಾರತೀಯ ಪ್ರಾಚೀನ ವಿಜ್ಞಾನ ನಿಕಾಯದ ಅಡಿಯಲ್ಲಿ ಸಮಾಲೋಚನೆ ಮತ್ತು ಯೋಗ ಚಿಕಿತ್ಸೆ ವಿಭಾಗದಲ್ಲಿ ಯೋಗ ಎಂ. ಎಸ್ಸಿ, ಪಿ. ಜಿ. ಡಿಪ್ಲೋಮ, ಡಿಪ್ಲೋಮ, ಸರ್ಟಿಫಿಕೇಟ್ ಕೋರ್ಸ್ಗಳನ್ನು ನಡೆಸಲಾಗುತ್ತಿದೆ. ಸದರಿ ವರ್ಷದಲ್ಲಿ ಬಿ. ಎಸ್ಸಿ. ಯೋಗ ವಿಜ್ಞಾನ ಮತ್ತು ಸಮಾಲೋಚನೆ ವಿಷಯದಲ್ಲಿ ಪದವಿ ಕೋರ್ಸ್ ಪ್ರಾರಂಭ ಮಾಡುತ್ತಿರುವುದರಿಂದ ಸದರಿ ವರ್ಷದಲ್ಲಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಪರೀಕ್ಷೆಯು ಸಮೀಪಿಸುತ್ತಿರುವುದರಿಂದ ತಾತ್ಕಾಲಿಕವಾಗಿ ಸಮಾಲೋಚನೆ ವಿಷಯಕ್ಕೆ ಹಾಗೂ ಚಿಕಿತ್ಸಾ/ಮಾನಸ ರೋಗ ತಜ್ಞರ ವಿಷಯಕ್ಕೆ ಸಂಬಂಧಿಸಿದಂತೆ ನುರಿತ ಅನುಭವವುಳ್ಳವರನ್ನು ಸಂದರ್ಶಕ ಪ್ರಾಧ್ಯಾಪಕರನ್ನಾಗಿ ನೇಮಿಸಿಕೊಳ್ಳಬೇಕಾಗಿದೆ.<br><br>ಈಗಾಗಲೇ ವಿಶ್ವವಿದ್ಯಾಲಯದಲ್ಲಿ ವಿಶೇಷ ಉಪನ್ಯಾಸವನ್ನು ನೀಡಿರುವ ಪ್ರೊ. ಎಂ. ಶ್ರೀನಿವಾಸ್ ಮೂರ್ತಿ ಹಾಗೂ ಡಾ. ನಿರಂಜನ ಹೆಗ್ಡೆ ಇವರಿಗೆ ತಾತ್ಕಾಲಿಕವಾಗಿ ತರಗತಿಗಳನ್ನು ತೆಗೆದುಕೊಳ್ಳಲು ಅವಕಾಶ ಮಾಡಿಕೊಡುವ ಬಗ್ಗೆ ದಿ: 19.07.2023 ರಂದು ನಡೆದ ಪ್ರಶಿಕ್ಷಣ ಪರಿಷತ್ತಿನ 35ನೇ ಸಭೆಯಲ್ಲಿ ಅನುಮೋದನೆ ಪಡೆದು, ಪ್ರಶಾಸನ ಸಮಿತಿಯ ನಿರ್ಣಯಕ್ಕಾಗಿ ಮಂಡಿಸಿದೆ. |
| ನಿರ್ಣಯ | **ಸಭೆಯು ಪ್ರೊ. ಎಂ. ಶ್ರೀನಿವಾಸ್ ಮೂರ್ತಿ ಹಾಗೂ ಡಾ. ನಿರಂಜನ ಹೆಗ್ಡೆ ಇವರನ್ನು ಸಂದರ್ಶಕ ಉಪನ್ಯಾಸಕರಾಗಿ ತಾತ್ಕಾಲಿಕವಾಗಿ ಸೇವೆಯನ್ನು ಪಡೆಯಲು ಅನುಮೋದಿಸಿತು ಮತ್ತುಮುಂದಿನ ದಿನಗಳಲ್ಲಿ ಅಗತ್ಯಕ್ಕೆ ಅನುಗುಣವಾಗಿ ಸಂದರ್ಶಕ ಉಪನ್ಯಾಸಕರನ್ನು ನೇಮಿಸಲು ತೀರ್ಮಾನಿಸಲಾಯಿತು.** |
| ವಿಷಯ 34<br><br>ಟಿಪ್ಪಣಿ | **2022-23ನೇ ಸಾಲಿನ ವಿವಿಧ ಕೋರ್ಸಗಳ ಶುಲ್ಕ ನಿಗದಿಗೊಳಿಸುವ ಬಗ್ಗೆ.**<br>ವಿಶ್ವವಿದ್ಯಾಲಯ ಮತ್ತು ಸಂಯೋಜಿತ ಸಂಸ್ಥೆಗಳಲ್ಲಿ ಸ್ನಾತಕ, ಸ್ನಾತಕೋತ್ತರ, ಡಿಪ್ಲೋಮಾ, ಸರ್ಟಿಫಿಕೇಟ್ ಮೊದಲಾದ ಕೋರ್ಸಗಳನ್ನು ನಡೆಸಲಾಗುತ್ತಿದೆ. ಈ ತರಗತಿಗಳಿಗೆ ಈಗಾಗಲೇ ಶುಲ್ಕವನ್ನು ನಿಗದಿಪಡಿಸಲಾಗಿದೆ. 2022-23ನೇ ಸಾಲಿನ ಈ ಎಲ್ಲಾ ಕೋರ್ಸಗಳಿಗೆ ಹಿಂದಿನ ಶುಲ್ಕವನ್ನೇ ಮುಂದುವರಿಸುವ ಅಥವಾ ಶುಲ್ಕವನ್ನು ಪರಿಷ್ಕರಿಸುವ ಬಗ್ಗೆ ದಿ: 19.07.2023 ರಂದು ನಡೆದ ಪ್ರಶಿಕ್ಷಣ ಪರಿಷತ್ತಿನ 35ನೇ ಸಭೆಯಲ್ಲಿ ವಿಷಯ ಮಂಡಿಸಿ, ವಿವಿಧ ಶುಲ್ಕಗಳ ಪರಿಷ್ಕರಣೆಗೆ ಅನುಮೋದನೆ ಪಡೆದು, ಪ್ರಶಾಸನ ಸಮಿತಿಯ ನಿರ್ಣಯಕ್ಕಾಗಿ ಮಂಡಿಸಿದೆ. |
| ನಿರ್ಣಯ | **ಪರೀಕ್ಷಾಂಗದ ಸಲಹೆಯಂತೆ ಬಿ.ಎ. ಮೂರು ವರ್ಷಕ್ಕೆ ಏಕರೂಪದ ಪರೀಕ್ಷಾ ಶುಲ್ಕವನ್ನು ಮತ್ತು ಹಾಗೂ ಎಮ್. ಎ. ಎರಡು ವರ್ಷಕ್ಕೆ ಏಕರೂಪದ ಪರೀಕ್ಷಾ ಶುಲ್ಕವನ್ನು ನಿಗದಿಪಡಿಸಲು ತೀರ್ಮಾನಿಸಿ, ವಿದ್ಯಾರ್ಥಿಗಳಿಗೆ ಹೊರೆಯಾಗದಂತೆ ಶುಲ್ಕ ಹೆಚ್ಚಳಕೆ ಸಭೆಯು ಅನುಮೋದಿಸಿತು. ವಿಶ್ವವಿದ್ಯಾಲಯ ಮತ್ತು ಸಂಯೋಜಿತ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ದಾಖಲಾತಿಯ ಮೇಲೆ ಪರಿಣಾಮ ಬೀರದಂತೆ ಅಲ್ಪ ಪ್ರಮಾಣದಲ್ಲಿ ಶುಲ್ಕಗಳನ್ನು ಹೆಚ್ಚಿಸುವ ಬಗ್ಗೆ ನಿರ್ಣಯ ಕೈಗೊಳ್ಳುವ ಅಧಿಕಾರವನ್ನು ಕುಲಪತಿಗಳಿಗೆ ನೀಡಿತು.** |
| ವಿಷಯ 35<br><br>ಟಿಪ್ಪಣಿ | **ಯೋಗ ವಿಭಾಗದ 2022ನೇ ಸಾಲಿನ ಪಿ. ಜಿ. ಡಿಪ್ಲೋಮ ಯೋಗ ವಿಜ್ಞಾನ, ಡಿಪ್ಲೋಮ ಯೋಗ ವಿಷಯದ ಪಠ್ಯಕ್ರಮವನ್ನು ಅನುಮೋದಿಸುವ ಬಗೆಗೆ.**<br><br>ವಿಶ್ವವಿದ್ಯಾಲಯದಲ್ಲಿ ಭಾರತೀಯ ಪ್ರಾಚೀನ ವಿಜ್ಞಾನ ನಿಕಾಯದ ಸಮಾಲೋಚನೆ ಮತ್ತು ಯೋಗ ಚಿಕಿತ್ಸೆ ವಿಭಾಗದಲ್ಲಿ ಯೋಗ ಎಂ. ಎಸ್ಸಿ, ಪಿ. ಜಿ. ಡಿಪ್ಲೋಮ, ಡಿಪ್ಲೋಮ, ಸರ್ಟಿಫಿಕೇಟ್ ಕೋರ್ಸ್ಗಳನ್ನು ನಡೆಸಲಾಗುತ್ತಿದ್ದು, 2022ನೇ ಸಾಲಿನಲ್ಲಿ ಪಿ.ಜಿ.ಡಿಪ್ಲೋಮ ವಿಜ್ಞಾನ, ಡಿಪ್ಲೋಮ ಯೋಗ ವಿಷಯದ ಬಿ.ಓ.ಎಸ್ ನಲ್ಲಿ ಪಠ್ಯಕ್ರಮವನ್ನು (70 ಅಂಕಗಳಿಗೆ ಲಿಖಿತ ಪರೀಕ್ಷೆ + 30 ಅಂಕಗಳಿಗೆ ಅಂತರಿಕ ಪರೀಕ್ಷೆ =ಒಟ್ಟು 100 ಅಂಕಗಳಂತೆ 500 ಅಂಕಗಳಿಗೆ ಸಿ.ಬಿ.ಸಿ.ಎಸ್ ಪ್ರಕಾರದಲ್ಲಿ) ಸಿದ್ಧಪಡಿಸಲಾಗಿದೆ. ಮುಂದೆ ಪರೀಕ್ಷೆಯನ್ನು ಇದೇ ಮಾದರಿಯಲ್ಲಿ ನಡೆಸಬೇಕಾಗಿದ್ದು, ಈ ಪಠ್ಯಕ್ರಮಕ್ಕೆ ದಿ: 19.07.2023 ರಂದು ನಡೆದ ಪ್ರಶಿಕ್ಷಣ ಪರಿಷತ್ತಿನ 35ನೇ |

| | |
|---|---|
| | ಸಭೆಯಲ್ಲಿ ಈ ಪರಿನಿಯಮಕ್ಕೆ ಅನುಮೋದನೆ ಪಡೆದಿದ್ದು, ಪ್ರಶಾಸನ ಸಮಿತಿಯ ನಿರ್ಣಯಕ್ಕಾಗಿ ಮಂಡಿಸಿದೆ. |
| ನಿರ್ಣಯ | **ಯೋಗ ವಿಭಾಗದ 2022ನೇ ಸಾಲಿನ ಪಿ.ಜಿ.ಡಿಪ್ಲೋಮ ಯೋಗ ವಿಜ್ಞಾನ, ಡಿಪ್ಲೋಮ ಯೋಗ ವಿಷಯದ ಪಠ್ಯಕ್ರಮವನ್ನು ಅನುಮೋದಿಸಲಾಯಿತು.** |
| ವಿಷಯ 36<br><br>ಟಿಪ್ಪಣಿ | **ಸಂಸ್ಕೃತ ಭಾಷಾ ನಿಕಾಯದ 2022ನೇ ಸಾಲಿನ ಪಿ. ಜಿ. ಡಿಪ್ಲೋಮ, ಡಿಪ್ಲೋಮ ಸಂಸ್ಕೃತ ವಿಷಯದ ಪಠ್ಯಕ್ರಮವನ್ನು ಅನುಮೋದಿಸುವ ಬಗ್ಗೆ.**<br><br>ವಿಶ್ವವಿದ್ಯಾಲಯದಲ್ಲಿ ಸಂಸ್ಕೃತ ಭಾಷಾ ನಿಕಾಯದ ಸಂಸ್ಕೃತ ಭಾಷೆ ಮತ್ತು ಸಾಹಿತ್ಯ ವಿಭಾಗದಲ್ಲಿ ಪಿ. ಜಿ. ಡಿಪ್ಲೋಮ, ಡಿಪ್ಲೋಮ, ಸರ್ಟಿಫಿಕೇಟ್ ಸಂಸ್ಕೃತ ಕೋರ್ಸ್‌ಗಳನ್ನು ನಡೆಸಲಾಗುತ್ತಿದ್ದು, 2022ನೇ ಸಾಲಿನಲ್ಲಿ ಪಿ. ಜಿ. ಡಿಪ್ಲೋಮ, ಡಿಪ್ಲೋಮ, ಸರ್ಟಿಫಿಕೇಟ್ ಸಂಸ್ಕೃತ ವಿಷಯದ ಪಠ್ಯಕ್ರಮವನ್ನು ಬಿ.ಓ.ಎಸ್. ನಲ್ಲಿ ಸಿದ್ಧಪಡಿಸಲಾಗಿದ್ದು, ತರಗತಿಯನ್ನು ನಡೆಸಲಾಗುತ್ತಿದೆ. ಈ ಪಠ್ಯಕ್ರಮವನ್ನು ಅಳವಡಿಸಿಕೊಳ್ಳಲು ಈ ಪಠ್ಯಕ್ರಮಕ್ಕೆ ದಿ: 19.07.2023 ರಂದು ನಡೆದ ಪ್ರಶಿಕ್ಷಣ ಪರಿಷತ್ತಿನ 35ನೇ ಸಭೆಯಲ್ಲಿ ಈ ಪರಿನಿಯಮಕ್ಕೆ ಅನುಮೋದನೆ ಪಡೆದಿದ್ದು, ಪ್ರಶಾಸನ ಸಮಿತಿಯ ನಿರ್ಣಯಕ್ಕಾಗಿ ಮಂಡಿಸಿದೆ. |
| ನಿರ್ಣಯ | **ಸಂಸ್ಕೃತ ಭಾಷಾ ನಿಕಾಯದ 2022ನೇ ಸಾಲಿನ ಪಿ.ಜಿ.ಡಿಪ್ಲೋಮ, ಡಿಪ್ಲೋಮ ಸಂಸ್ಕೃತ ವಿಷಯದ ಪಠ್ಯಕ್ರಮವನ್ನು ಅನುಮೋದಿಸಲಾಯಿತು.** |
| ವಿಷಯ 37<br><br>ಟಿಪ್ಪಣಿ | **ಸಂಯೋಜಿತ ಕಾಲೇಜಿನ ಸಿಬ್ಬಂದಿಗಳಿಗೆ Faculty Development Program ನಡೆಸುವ ಬಗ್ಗೆ.**<br>ವಿಶ್ವವಿದ್ಯಾಲಯದಡಿಯಲ್ಲಿ 31 ಸಂಯೋಜಿತ ಕಾಲೇಜುಗಳಿದ್ದು ಇವುಗಳಲ್ಲಿ ಸಾವಿರಾರು ವಿದ್ಯಾರ್ಥಿಗಳು ಅಧ್ಯಯನ ಮಾಡುತ್ತಿದ್ದಾರೆ. ಕಾಲೇಜಿನಲ್ಲಿ ನುರಿತ ಬೋಧಕರು ಪಾಠ-ಪ್ರವಚನ ನಡೆಸುತ್ತಿದ್ದಾರೆ. ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣವನ್ನು ನೀಡುವ ಉದ್ದೇಶದಿಂದ ಪುನಶ್ಚೇತನ ಶಿಬಿರ ಮೊದಲಾದವನ್ನು ಕಾಲಕಾಲಕ್ಕೆ ನಡೆಸಲಾಗುತ್ತಿದೆ. ಅದರಂತೆ, ಸಂಯೋಜಿತ ಕಾಲೇಜುಗಳ ಬೋಧಕ ಸಿಬ್ಬಂದಿಗಳಿಗೆ **Faculty Development Program** ನಡೆಸಲು ದಿ: 19.07.2023 ರಂದು ನಡೆದ ಪ್ರಶಿಕ್ಷಣ ಪರಿಷತ್ತಿನ 35ನೇ ಸಭೆಯಲ್ಲಿ ಅನುಮೋದನೆ ಪಡೆದು, ಪ್ರಶಾಸನ ಸಮಿತಿಯ ನಿರ್ಣಯಕ್ಕಾಗಿ ಮಂಡಿಸಿದೆ. |
| ನಿರ್ಣಯ | **ಮಾನ್ಯ ಕುಲಪತಿಗಳು ವಿವಿಧ ಮಠಗಳ ಸಹಯೋಗದಲ್ಲಿ ಈ ಕಾರ್ಯಕ್ರಮವನ್ನು ಆಯೋಜಿಸಲು ಉದ್ದೇಶಿಸಿರುವುದಾಗಿ ಸಭೆಗೆ ತಿಳಿಸಿದರು. ಬೋಧನೆಯ ಗುಣ ಮಟ್ಟವನ್ನು ಹೆಚ್ಚಿಸಲು ಇದು ಅತ್ಯಗತ್ಯವಾಗಿದೆ ಎಂದು ಅಭಿಪ್ರಾಯಿಸಿ, ಸಂಘ ಸಂಸ್ಥೆ, ಮಠಗಳ ಸಹಯೋಗದಲ್ಲಿ ಈ ಕಾರ್ಯಕ್ರಮವನ್ನು ಆಯೋಜಿಸಲು ಅನುಮೋದಿಸಿತು.** |
| ವಿಷಯ 38<br><br>ಟಿಪ್ಪಣಿ | **ಬಯೋ-ಮೆಟ್ರಿಕ್ ಹಾಜರಾತಿಯನ್ನು ಅನುಸರಿಸುವ ಬಗ್ಗೆ.**<br>ಸರ್ಕಾರದ ಆದೇಶದಂತೆ ಎಲ್ಲಾ ಸಿಬ್ಬಂದಿಗಳು ಬಯೋ-ಮೆಟ್ರಿಕ್ ಹಾಜರಾತಿಯನ್ನು ಅನುಸರಿಸುವುದು ಕಡ್ಡಾಯವಾಗಿದೆ. ಎಲ್ಲಾ ಇಲಾಖೆ, ವಿವಿಧ ಮಂಡಳಿ, ವಿಶ್ವವಿದ್ಯಾಲಯ ಇನ್ನಿತರ ಸರ್ಕಾರಿ ಸಂಸ್ಥೆಗಳಲ್ಲಿ ಈಗಾಗಲೇ ಇದನ್ನು ಅಳವಡಿಸಿಕೊಳ್ಳಲಾಗಿದೆ. ಸಿಬ್ಬಂದಿಗಳ ಕಾರ್ಯಕ್ಷಮತೆಗೆ ಇದು ಪೂರಕವಾಗಿದೆ. ಆದ್ದರಿಂದ ವಿಶ್ವವಿದ್ಯಾಲಯದ ಎಲ್ಲಾ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳು ಹಾಗೂ ಅನುದಾನಿತ ಸಂಸ್ಕೃತ ಕಾಲೇಜು ಮತ್ತು ಪಾಠಶಾಲೆಗಳ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳು ಬಯೋ-ಮೆಟ್ರಿಕ್ ಹಾಜರಾತಿಯನ್ನು ಕಡ್ಡಾಯವಾಗಿ ಪಾಲಿಸುವಂತೆ ಹಾಗೂ ಮಾಸಿಕ ವೇತನ ಬಿಲ್ಲಿನ ಜೊತೆಗೆ ಬಯೋ-ಮೆಟ್ರಿಕ್ ಹಾಜರಾತಿಯನ್ನು ಸಲ್ಲಿಸುವಂತೆ ಸೂಚಿಸಲು ದಿ: 19.07.2023 ರಂದು ನಡೆದ ಪ್ರಶಿಕ್ಷಣ ಪರಿಷತ್ತಿನ 35ನೇ ಸಭೆಯಲ್ಲಿ ಅನುಮೋದನೆ ಪಡೆದು, ಪ್ರಶಾಸನ ಸಮಿತಿಯ ನಿರ್ಣಯಕ್ಕಾಗಿ ಮಂಡಿಸಿದೆ. |
| ನಿರ್ಣಯ | **ಆಯಾ ಸಂಸ್ಥೆಗಳೇ ಬಯೋ-ಮೆಟ್ರಿಕ್ ಯಂತ್ರದ ಅಳವಡಿಕೆ ಮತ್ತು ನಿರ್ವಹಣೆಯ ವೆಚ್ಚವನ್ನು ಭರಿಸತಕ್ಕದ್ದು ಎಂದು ಸೂಚಿಸಿ, ವಿಶ್ವವಿದ್ಯಾಲಯ ಮತ್ತು ಅನುದಾನಿತ ಸಂಸ್ಥೆಗಳ ಎಲ್ಲಾ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳು ಆಗಮನ ಮತ್ತು** |

| | |
|---|---|
| | **ನಿರ್ಗಮನ ಸಮಯದಲ್ಲಿ ಬಯೋ-ಮೆಟ್ರಿಕ್ ಹಾಜರಾತಿಯನ್ನು ಕಡ್ಡಾಯವಾಗಿ ಅನುಸರಿಸುವುದನ್ನು ಸಭೆಯು ಅನುಮೋದಿಸಿತು.** |
| **ವಿಷಯ 39**<br><br>**ಟಿಪ್ಪಣಿ** | **ವಿಶ್ವವಿದ್ಯಾಲಯದ ಕೇಂದ್ರ ಗ್ರಂಥಾಲಯಕ್ಕೆ ಪುಸ್ತಕಗಳನ್ನು ಖರೀದಿಸುವ ಬಗ್ಗೆ.**<br><br>ವಿಶ್ವವಿದ್ಯಾಲಯದ ವಾರ್ಷಿಕ ಕ್ರಿಯಾಯೋಜನೆಯಲ್ಲಿ ಗ್ರಂಥಾಲಯಕ್ಕೆ 5ಲಕ್ಷ ರೂ. ಗಳನ್ನು ಮೀಸಲಿರಿಸಿದ್ದು, ಗ್ರಂಥಾಲಯ ಸಲಹಾ ಸಮಿತಿಯ ಸಭೆಯ ನಿರ್ಣಯದ ಮೇರೆಗೆ ವಿವಿಧ ವಿಭಾಗಗಳ ಅವಶ್ಯಕತೆಗನುಸಾರವಾಗಿ ಅಗತ್ಯವಿರುವ ಪುಸ್ತಕಗಳನ್ನು ಖರೀದಿಸಬಹುದಾಗಿದೆ. ನಿಯಮಾನುಸಾರ ಆರ್ಥಿಕ ಮಿತಿಯಲ್ಲಿ ಪುಸ್ತಕಗಳನ್ನು ಖರೀದಿಸುವ ಬಗ್ಗೆ ದಿ: 19.07.2023 ರಂದು ನಡೆದ ಪ್ರಶಿಕ್ಷಣ ಪರಿಷತ್ತಿನ 35ನೇ ಸಭೆಯಲ್ಲಿ ಅನುಮೋದನೆ ಪಡೆದು, ಪ್ರಶಾಸನ ಸಮಿತಿಯ ನಿರ್ಣಯಕ್ಕಾಗಿ ಮಂಡಿಸಿದೆ. |
| **ನಿರ್ಣಯ** | **ನಿಯಮಾನುಸಾರ ಅಗತ್ಯ ಪುಸ್ತಕಗಳನ್ನು ಖರೀದಿಸಲು ಸಭೆಯು ಅನುಮೋದಿಸಿತು.** |
| **ವಿಷಯ 40**<br><br>**ಟಿಪ್ಪಣಿ** | **ವಿಶ್ವವಿದ್ಯಾಲಯದ ಪರೀಕ್ಷಾ ಕೈಪಿಡಿಯನ್ನು ಅನುಮೋದಿಸುವ ಬಗ್ಗೆ.**<br><br>ವಿಶ್ವವಿದ್ಯಾಲಯದಲ್ಲಿ ಪರೀಕ್ಷಾಂಗವು ಕಾರ್ಯ ನಿರ್ವಹಿಸುತ್ತಿದ್ದು, ಸ್ನಾತಕ, ಸ್ನಾತಕೋತ್ತರ, ಡಿಪ್ಲೋಮಾ, ಸರ್ಟಿಫಿಕೇಟ್ ಮೊದಲಾದ ಹಲವು ಪರೀಕ್ಷೆಗಳನ್ನು ಕಾಲಕಾಲಕ್ಕೆ ನಡೆಸುವುದು ಇದರ ಜವಾಬ್ದಾರಿಯಾಗಿದೆ. ಎಲ್ಲಾ ಪರೀಕ್ಷಾ ಕಾರ್ಯಗಳನ್ನು ಸುಗಮವಾಗಿ ನಡೆಸಲು ನಿಯಮಗಳು ಅತ್ಯವಶ್ಯಕವಾಗಿವೆ. ಇದಕ್ಕಾಗಿ ಪರೀಕ್ಷಾ ನಿಯಮಗಳ ಕೈಪಿಡಿಯನ್ನು ರಚಿಸಿ ದಿ: 19.07.2023 ರಂದು ನಡೆದ ಪ್ರಶಿಕ್ಷಣ ಪರಿಷತ್ತಿನ 35ನೇ ಸಭೆಯಲ್ಲಿ ಅನುಮೋದನೆ ಪಡೆದು, ಪ್ರಶಾಸನ ಸಮಿತಿಯ ನಿರ್ಣಯಕ್ಕಾಗಿಮಂಡಿಸಿದೆ. |
| **ನಿರ್ಣಯ** | **ಪರೀಕ್ಷಾ ಕೈಪಿಡಿಯನ್ನು ಅನುಮೋದಿಸಿ ಸರ್ಕಾರಕ್ಕೆ ಸಲ್ಲಿಸಲು ಸೂಚಿಸಿತು.** |
| **ವಿಷಯ 41**<br><br>**ಟಿಪ್ಪಣಿ** | **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಸಂಯೋಜನಾ ಪರಿನಿಯಮ 2019ರ ಕರಡನ್ನು ಪುನರ್ ಅನುಮೋದಿಸುವ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಅಡಿಯಲ್ಲಿ ಕಾಲೇಜುಗಳ ಪ್ರಾರಂಭಕ್ಕೆ, ಸಂಯೋಜನೆ, ಮಾನ್ಯತೆಗೆ ಸಂಬಂಧಿಸಿದಂತೆ ಸಂಯೋಜನಾ ಪರಿನಿಯಮ 2019ಕ್ಕೆ ದಿನಾಂಕ: 12.01.2021ರಂದು ನಡೆದ 3ಲನೇ ಹಣಕಾಸು ಸಮಿತಿ ಸಭೆಯು ಅನುಮೋದನೆ ನೀಡಿದ್ದು, ದಿ: 09.06.2023 ರಂದು ನಡೆದ ಹಣಕಾಸು ಸಮಿತಿಯ 43ನೇ ಸಭೆಯಲ್ಲಿ ಮಂಡಿಸಿದ್ದು, ಸಭೆಯು ಅನುಮೋದಿಸಿ ಕರಡು ಸಂಯೋಜನಾ ಪರಿನಿಯಮವನ್ನು ಮುಂಬರುವ ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಸಲ್ಲಿಸಲು ಸೂಚಿಸಿದ್ದು, ಪ್ರಶಾಸನ ಸಮಿತಿಯ ಅನುಮೋದನೆಗೆ ಮಂಡಿಸಿದೆ. |
| **ನಿರ್ಣಯ** | **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಸಂಯೋಜನಾ ಪರಿನಿಯಮ 2019ರ ಪರಿನಿಯಮವನ್ನು ಅನುಮೋದಿಸಿ ಸರ್ಕಾರದ ಅನುಮೋದನೆಗೆ ಸಲ್ಲಿಸಲು ಸೂಚಿಸಿತು.** |
| **ವಿಷಯ 42**<br><br>**ಟಿಪ್ಪಣಿ** | **ವಿಶ್ವವಿದ್ಯಾಲಯದ ಪರಿಚಾಯಿಕೆ ಮತ್ತು ಯು.ಜಿ. ಶೈಕ್ಷಣಿಕ ವೇಳಾಪಟ್ಟಿಯನ್ನು ಅನುಮೋದಿಸುವ ಬಗ್ಗೆ.**<br>ವಿಶ್ವವಿದ್ಯಾಲಯದಲ್ಲಿ ಮತ್ತು ಸಂಯೋಜಿತ ಸಂಸ್ಥೆಗಳಲ್ಲಿ ಹಲವು ಸ್ನಾತಕ, ಸ್ನಾತಕೋತ್ತರ, ಡಿಪ್ಲೋಮಾ, ಸರ್ಟಿಫಿಕೇಟ್ ಮೊದಲಾದ ಕೋರ್ಸಗಳನ್ನು ನಡೆಸಲಾಗುತ್ತಿದೆ. ಇವುಗಳನ್ನು ಕ್ರಮಬದ್ಧವಾಗಿ ನಡೆಸಲು ಎಲ್ಲಾ ಕೋರ್ಸಿನ ಪರಿಚಯಕ್ಕಾಗಿ 2023-24ನೇ ಸಾಲಿನ ಸಂಕ್ಷಿಪ್ತ ಪರಿಚಾಯಿಕೆಯನ್ನು (Prospectus) ಸಿದ್ಧಪಡಿಸಿದೆ, ಹಾಗೂ ಸರ್ಕಾರಿ ಆದೇಶ ಸಂಖ್ಯೆ: ಇಡಿ 80 ಯು ಎನ್ ಇ 2023, ದಿ: 23.05.2023ರಂತೆ 2023-24ನೇ ಸಾಲಿನ ಸ್ನಾತಕ ತರಗತಿಗಳ |

| | |
|---|---|
| | ವೇಳಾಪಟ್ಟಿಯನ್ನು ಸಿದ್ಧಪಡಿಸಿ ದಿ: 19.07.2023 ರಂದು ನಡೆದ ಪ್ರಶಿಕ್ಷಣ ಪರಿಷತ್ತಿನ 35ನೇ ಸಭೆಯಲ್ಲಿ ಅನುಮೋದನೆ ಪಡೆದಿದ್ದು, ಪ್ರಶಾಸನ ಸಮಿತಿಯ ನಿರ್ಣಯಕ್ಕಾಗಿ ಮಂಡಿಸಿದೆ. |
| ನಿರ್ಣಯ | **ವಿಶ್ವವಿದ್ಯಾಲಯದ ಪರಿಚಾಯಿಕೆ ಮತ್ತು ಪರಿಷ್ಕೃತ ಯು.ಜಿ. ಶೈಕ್ಷಣಿಕ ವೇಳಾಪಟ್ಟಿಯನ್ನು ಅನುಮೋದಿಸಿತು.** |
| ವಿಷಯ 43 | **ಸರ್ಕಾರಿ ಸಂಸ್ಕೃತ ಕಾಲೇಜುಗಳನ್ನು ವಿಶ್ವವಿದ್ಯಾಲಯದ ಆಡಳಿತ ವ್ಯಾಪ್ತಿಗೆ ಹಿಂಪಡೆಯುವ ಬಗ್ಗೆ.** |
| ಟಿಪ್ಪಣಿ | ರಾಜ್ಯದಲ್ಲಿ ಸಂಸ್ಕೃತ ವಿಶ್ವವಿದ್ಯಾಲಯದ ಸ್ಥಾಪನೆಯಾದ ನಂತರ ಸಂಸ್ಕೃತ ಕಾಲೇಜುಗಳ ಆಡಳಿತವನ್ನು ಸುಸೂತ್ರವಾಗಿ ನಡೆಸುವ ದೃಷ್ಟಿಯಿಂದ ಸರ್ಕಾರಿ ಆದೇಶ ಸಂಖ್ಯೆ: ಇಡಿ 87 ಯುಪಿಸಿ 2010, ದಿ: 15.10.2010ರಂತೆ ಎಲ್ಲಾ ಸಂಸ್ಕೃತ ಕಾಲೇಜು ಮತ್ತು ಪಾಠಶಾಲೆಗಳನ್ನು ಅಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿ ಸಹಿತವಾಗಿ ಉನ್ನತ ಶಿಕ್ಷಣ ವ್ಯಾಪ್ತಿಯಿಂದ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ವ್ಯಾಪ್ತಿಗೆ ತರಲಾಗಿದೆ. ಆದರೆ ಕಾರಣಾಂತರಗಳಿಂದ ಸರ್ಕಾರಿ ಆದೇಶ ಸಂಖ್ಯೆ: ಇಡಿ 342 ಯುಎನ್ ಇ 2020, ದಿ: 31.03.2021 ರಲ್ಲಿ ಈ ಕೆಳಗಿನ 3 ಸರ್ಕಾರಿ ಸಂಸ್ಕೃತ ಕಾಲೇಜುಗಳನ್ನು ಸಿಬ್ಬಂದಿ ಮತ್ತು ಸ್ಥಿರ-ಚರ ಆಸ್ತಿ ಸಹಿತವಾಗಿ ವಿಶ್ವವಿದ್ಯಾಲಯದ ಆಡಳಿತ ವ್ಯಾಪ್ತಿಯಿಂದ ಕಾಲೇಜು ಶಿಕ್ಷಣ ಇಲಾಖೆಯ ವ್ಯಾಪ್ತಿಗೆ ವರ್ಗಾಯಿಸಲಾಗಿದೆ. |

| ಕ್ರ. ಸಂ. | ಕಾಲೇಜಿನ ಹೆಸರು |
|---|---|
| 1 | ಶ್ರೀ ಮನ್ಮಹಾರಾಜಾ ಸಂಸ್ಕೃತ ಕಾಲೇಜು, ನ್ಯೂ ಸಯ್ಯಾಜಿರಾವ್ ರೋಡ್, ಮೈಸೂರು–24 |
| 2 | ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜು, ಪಂಪಮಹಾಕವಿ ರಸ್ತೆ ಚಾಮರಾಜಪೇಟೆ, ಬೆಂಗಳೂರು–560018 |
| 3 | ಶ್ರೀ ಮೇಧಾ ದಕ್ಷಿಣಾಮೂರ್ತಿ ವೇದಭವನ ಸಂಸ್ಕೃತ ಕಾಲೇಜು, ಗೋಕರ್ಣ, ಕುಮಟ ತಾಲ್ಲೂಕು, ಉತ್ತರಕನ್ನಡ ಜಿಲ್ಲೆ. |

ಸಂಸ್ಕೃತ ಭಾಷೆಯ ಪುರೋಭಿವೃದ್ಧಿಗಾಗಿಯೇ ಸಂಸ್ಕೃತ ವಿಶ್ವವಿದ್ಯಾಲಯದ ಸ್ಥಾಪನೆಯಾಗಿದ್ದು, ಎಲ್ಲಾ ಸಂಸ್ಕೃತ ಕಾಲೇಜು, ಪಾಠಶಾಲೆ ಮತ್ತು ಇನ್ನಿತರ ಸಂಸ್ಕೃತ ಸಂಸ್ಥೆಗಳು ಒಂದೇ ಸೂರಿನಡಿ ಕರ್ತವ್ಯ ನಿರ್ವಹಿಸಿದರೆ ಮಾತ್ರ ವಿಶ್ವವಿದ್ಯಾಲಯ ಸ್ಥಾಪನೆಯ ಉದ್ದೇಶ ಸಫಲಾಗುತ್ತದೆ. ಅಲ್ಲದೇ ಬೆಂಗಳೂರು ಮತ್ತು ಮೈಸೂರಿನ ಸರ್ಕಾರಿ ಸಂಸ್ಕೃತ ಕಾಲೇಜುಗಳಲ್ಲಿ ವಿಶ್ವವಿದ್ಯಾಲಯವು ಈಗಾಗಲೇ ಅನೇಕ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಂಡಿದೆ. ಈ ಹಿನ್ನೆಲೆಯಲ್ಲಿ ಸರ್ಕಾರಿ ಸಂಸ್ಕೃತ ಕಾಲೇಜುಗಳನ್ನು ಪುನಃ ವಿಶ್ವವಿದ್ಯಾಲಯದ ವ್ಯಾಪ್ತಿಗೆ ಪಡೆಯುವ ಬಗ್ಗೆ ಸಭೆಯ ನಿರ್ಣಯಕ್ಕಾಗಿಮಂಡಿಸಿದೆ.

| | |
|---|---|
| ನಿರ್ಣಯ | **ಸರ್ಕಾರಿ ಸಂಸ್ಕೃತ ಕಾಲೇಜುಗಳನ್ನು ವಿಶ್ವವಿದ್ಯಾಲಯದ ಆಡಳಿತ ವ್ಯಾಪ್ತಿಗೆ ಹಿಂಪಡೆಯುವ ಬಗ್ಗೆ ಸೂಕ್ತ ಸಮರ್ಥನೆಗಳೊಂದಿಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಸಭೆಯು ಅನುಮೋದಿಸಿತು. ಅಲ್ಲದೇ ಸಂಸ್ಕೃತ ಶಿಕ್ಷಣ ಸಂಸ್ಥೆಗಳೆಲ್ಲವೂ ಒಂದೇ ಸೂರಿನಡಿ ಕಾರ್ಯ ನಿರ್ವಹಿಸುವುದು ಸಂಸ್ಕೃತದ ಅಭಿವೃದ್ಧಿಗೆ ಪೂರಕವಾಗುತ್ತದೆ. ಆದ್ದರಿಂದ ಮುಜರಾಯಿ ಇಲಾಖೆಯ ವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸುವ ಸಂಸ್ಕೃತ ಕಾಲೇಜು, ಪಾಠಶಾಲೆ ಹಾಗೂ ಇನ್ನಿತರ ಸಂಸ್ಕೃತ ಶಿಕ್ಷಣ ಸಂಸ್ಥೆಗಳನ್ನೂ ಸಹ ವಿಶ್ವವಿದ್ಯಾಲಯದ ವ್ಯಾಪ್ತಿಗೆ ಪಡೆಯುವುದು ಯೋಗ್ಯವೆಂದು ಅಭಿಪ್ರಾಯಿಸಿ, ಈ ಬಗ್ಗೆ ಕ್ರಮ ವಹಿಸಲು ಸೂಚಿಸಿತು.** |

**ಕುಲಸಚಿವರು**
ಕುಲಸಚಿವರು
ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ
ಬೆಂಗಳೂರು – 560018

**ಕುಲಪತಿಗಳು**
ಕುಲಪತಿಗಳು
ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ
ಬೆಂಗಳೂರು – 560018.